


No.MAG(3)/NPP/98/2023-2024

ಸ್ಥಾಪನೆ : ೧೯೭೯

No.MAG(3)/NPP/99/2023-2024




# ಹೊಂಗನಸು


ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂಗನಸು–೧೧೨

ಸಂಪುಟ: ೧೨ ಸಂಚಿಕೆ: ೧೨ | ಮಾರ್ಚ್ ೨೦೨೫ | ಪುಟಗಳು-೮ | ವಾರ್ಷಿಕ ಚಂದಾ ರೂ.೨೦/- | ಶ್ರೀ ಕ್ರೋಧಿ ಸಂವತ್ಸರ
Volume: 12 Issue: 12 | March 2025 | Pages-8 | Annual Subscription Rs.20/- | ಮಾಘ-ಫಾಲ್ಗುಣ ಮಾಸ

ಪ್ರಕಾಶಕರು
**ಬಿ.ಎಂ.ಶ್ರೀ. ಪ್ರತಿಷ್ಠಾನ**

ಪ್ರಧಾನ ಸಂಪಾದಕರು
**ಡಾ. ರಾಮೇಗೌಡ**

ಸಂಪಾದಕರು
**ಡಾ. ಬೆಳವಾಡಿ ಪ್ರಭಾಕರ**



**ಬಿ.ಎಂ.ಶ್ರೀ. ಪ್ರತಿಷ್ಠಾನ**
**ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

**ಕಛೇರಿ ಸಮಯ**
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜಾ ದಿನ : ಭಾನುವಾರ



**ಚಂದಾ ವಿವರ**
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-



**ದಿ। ಪ್ರೊ. ಎಂ.ವಿ. ಸೀತಾರಾಮಯ್ಯ**
ಸಂಸ್ಥಾಪಕರು
**ಡಾ. ಪಿ.ವಿ. ನಾರಾಯಣ**
ಗೌರವಾಧ್ಯಕ್ಷರು

**ಪದಾಧಿಕಾರಿಗಳು**
- ಅಧ್ಯಕ್ಷ
  **ಡಾ. ಬೈರಮಂಗಲ ರಾಮೇಗೌಡ**
  ೯೩೪೧೨೫೮೧೪೨
- ಗೌರವ ಕಾರ್ಯದರ್ಶಿ
  **ಡಾ. ಶಾಂತರಾಜು**
  ೯೮೦೪೮೧೪೮೮೪
- ಗೌರವ ಕೋಶಾಧಿಕಾರಿ
  **ಚಂದ್ರಶೇಖರ ನಾದೂರು**
  ೯೪೫೦೦೪೮೪೬

**ಸಂಯೋಜನಾಧಿಕಾರಿಗಳು**
**ಬಿ.ಎಸ್. ಗುರುಪ್ರಸಾದ್**
ಹಸ್ತಪ್ರತಿ ವಿಭಾಗ
**ಡಾ. ಶಾಂತರಾಜು**
ಎಂ.ವಿ.ಸೀ. ಸಂಶೋಧನಾ ಕೇಂದ್ರ


## ಸಂನುಡಿ

## ‘ಶೈಕ್ಷಣಿಕ ಪದ್ಧತಿ ಮರಳಿ ಗೂಡಿಗೆ, ಬರುವುದೇ ನಾಡಿಗೆ?’

ಶಾಲೆಗಳಲ್ಲಿ ಅಂದು ಪುಸ್ತಕಾಧಾರಿತ ಶಿಕ್ಷಣ ನಡೆದಿತ್ತು. ತಂತ್ರಜ್ಞಾನದ ಸೆಳೆತದಲ್ಲಿ ಡಿಜಿಟಲೀಕರಣವೆಂಬ ಕಾರ್ಮೋಡ ಮುಸುಕಿ, ಪುಸ್ತಕಗಳ ಜಾಗವನ್ನು ಲ್ಯಾಪ್ಟಾಪ್, ಐಪಾಡ್ ಮುಂತಾದವುಗಳು ಕ್ರಮೇಣ ಆಕ್ರಮಿಸಲಾರಂಭಿಸಿದವು. ಜಾಗತಿಕ ಮಟ್ಟದಲ್ಲಿ ೨೦೦೯ರಲ್ಲಿ ಸ್ವೀಡನ್ ದೇಶ ಮುಂಚೂಣಿಗೆ ಬಂದು, ಶಾಲೆಗಳಲ್ಲಿ ಪುಸ್ತಕಗಳ ಬದಲು ಡಿಜಿಟಲೀಕರಣ ಪದ್ಧತಿಯನ್ನು ತಂದು ಪಠ್ಯಪುಸ್ತಕಗಳ ಮುದ್ರಣವನ್ನು ಹಂತ ಹಂತವಾಗಿ ನಿಲ್ಲಿಸಿಬಿಟ್ಟಿತು. ಮಕ್ಕಳು ಪರದೆಯ ಮೇಲೆ ಓದುವುದನ್ನು ಕಡ್ಡಾಯ ಮಾಡಿತು. ಇದಕ್ಕೆ ಸಾಕಷ್ಟು ಹಣವನ್ನೂ ವ್ಯಯ ಮಾಡಿ ಪ್ರಚಾರವನ್ನೂ ಕೊಟ್ಟಿತು.

ಇದೀಗ ೧೫ ವರ್ಷಗಳ ನಂತರ ಅದೇ ದೇಶದ ಸರಕಾರಕ್ಕೆ ತನ್ನ ತಪ್ಪಿನ ಅರಿವಾಗಿ, ಎಚ್ಚೆತ್ತು ಮತ್ತೆ ವಿಪುಲವಾಗಿ ಹಣವನ್ನು ಖರ್ಚು ಮಾಡುತ್ತಾ ಪಠ್ಯಪುಸ್ತಕಗಳ ಮುದ್ರಣವನ್ನು ಪ್ರಾರಂಭಿಸಿದೆ ಎಂದು ವಾರ್ತಾ ಪತ್ರಿಕೆಗಳಿಂದ ತಿಳಿದುಬರುತ್ತಿದೆ. ಸ್ವೀಡನ್ ದೇಶದ ಶಾಲೆಗಳಲ್ಲಿ ಆದದ್ದಾದರೂ ಏನು? ಹೀಗೆ ಒಮ್ಮೆಲೇ ಮನಃಪರಿವರ್ತನೆಯಾಗಲು ಕಾರಣಗಳೇನು ಎಂಬ ಅಂಶ ಬೆಳಕಿಗೆ ಬಂದಿದೆ.

ಒಂದು ಕಾಲದಲ್ಲಿ ಸ್ವೀಡನ್ ಡಿಜಿಟಲೀಕೃತ ಶಿಕ್ಷಣ ಪದ್ಧತಿಯಲ್ಲಿ ಉಳಿದ ದೇಶಗಳಿಗಿಂತ ಮುಂದೆ ಇತ್ತು. ವಿದ್ಯಾರ್ಥಿಗಳಿಗೆ ಕಲಿಯಲು ಹಾಳೆಗಳಿಗಿಂತ ಪರದೆಗಳೇ ಮೇಲು ಎನ್ನುತ್ತಿತ್ತು. ಆದರೆ ಇದೀಗ ಈ ಪದ್ಧತಿ ಸಲ್ಲದು, ಇದರಿಂದ ವಿದ್ಯಾಭ್ಯಾಸದ ಮೇಲೆ ಅಗಾಧ ದುಷ್ಪರಿಣಾಮಗಳು ಆಗುತ್ತಿವೆ, ಮನಸ್ಸಿಟ್ಟು ಏಕಾಗ್ರತೆಯಿಂದ ಓದುವ ಕ್ಷಮತೆ ಕಡಿಮೆಯಾಗುತ್ತಿದೆ, ಗ್ರಹಿಕೆಯ ಪ್ರಮಾಣ ಕ್ಷೀಣಿಸುತ್ತಿದೆ, ಮನಸ್ಸು ಅತ್ತಿತ್ತ ಸೆಳೆಯುತ್ತಿದೆ, ಹೀಗಾಗಿ ಮಕ್ಕಳಿಗೆ ಅವಶ್ಯಕವಾದ ಮೂಲ ಕೌಶಲ್ಯಗಳ ಕೊರತೆ ಕಾಣುತ್ತಿದೆ ಎಂಬ ಅಂಶ ಸ್ವೀಡನ್ ದೇಶಕ್ಕೆ ತಡವಾಗಿ ಅರಿವಾಗುತ್ತಿದೆ. ಪೋಷಕರು, ಶಿಕ್ಷಣ ತಜ್ಞರು ಮಾಡಿದ್ದ ಆಲೋಚನೆಯಿಂದ ಲಾಭಕ್ಕಿಂತ ನಷ್ಟವೇ ಅಧಿಕವಾಗಿ ಕಾಣಲು ಪ್ರಾರಂಭಿಸಿದಂತೆ ೨೦೦೯ರಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಮಹತ್ಕ್ರಾಂತಿಯನ್ನೇ ಮಾಡುತ್ತಿದ್ದೇವೆಂದು ಭಾವಿಸಿದ್ದ ಈ ದೇಶ ಮರಳಿ ಗೂಡಿಗೆ ಬಂದಿದೆ.

ಶಿಕ್ಷಕರು ವಿದ್ಯಾರ್ಥಿಗಳ ಬೆಳವಣಿಗೆಯನ್ನು ಗಮನಿಸಿದಾಗ, ಈ ಡಿಜಿಟಲೀಕರಣದಿಂದ ಪರದೆಯ ಮೇಲೆ ಪಠ್ಯಗಳನ್ನು ಓದುತ್ತಾ ನಡು ನಡುವೆ ಅದರಲ್ಲಿರುವ ಇನ್ನಿತರ ಆಕರ್ಷಣೀಯ ದೃಶ್ಯಗಳನ್ನು ನೋಡುತ್ತಲೋ, ಆಟಗಳನ್ನು ಆಡುತ್ತಲೋ ತಮ್ಮ ಗಮನವನ್ನು ಕಲಿಕೆಯಿಂದ ದೂರವಾಗಿಸುತ್ತಿದೆ, ಅದರಲ್ಲೂ ಇದು ತರಗತಿಗಳಲ್ಲಿ ಅತಿಯಾಗುತ್ತಾ ಶಿಕ್ಷಕರಿಗೆ ಇರುಸು ಮುರುಸು ಉಂಟು ಮಾಡುತ್ತಿದೆ ಎಂಬ ಗಮನೀಯವಾದ ಅಂಶ ಹೊರಬಿದ್ದಿದೆ. ಜೊತೆಗೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ನಡುವೆ ಇರಬೇಕಾದ ಸಂವಹನ ಮತ್ತು ಸಂಬಂಧಗಳೇ ನಶಿಸಿಹೋದಂತಾಗಿದೆ ಎಂಬ ಕೊರಗು ಉದ್ಭವವಾಗಿದ್ದು, ಮೊದಲಿನಂತೆ ಸಂಪರ್ಕ ಸೇತುವೆಯಾಗಿ ಮುದ್ರಿತ ಪಠ್ಯಪುಸ್ತಕಗಳೇ ಮೇಲು ಎಂಬುವರ ವಾದಕ್ಕೆ ಮನ್ನಣೆ ದೊರಕಿದೆ.

ಆದರೂ ಸ್ವೀಡನ್ ದೇಶ ಸಮತೋಲನವನ್ನು ಕಾಯ್ದುಕೊಳ್ಳಲು ಮುದ್ರಿತ ಪಠ್ಯಪುಸ್ತಕಗಳ ಜೊತೆಗೆ ಆಧುನಿಕ ಡಿಜಿಟಲ್ ವಿನ್ಯಾಸಗಳನ್ನು ಜೊತೆ ಜೊತೆಯಾಗಿ ತರುತ್ತಿರುವುದು ವಿದ್ಯಾರ್ಥಿಗಳು ಜಾಗತಿಕ ಮಟ್ಟದಲ್ಲಿ ಮುಂಚೂಣಿಯಲ್ಲಿರಲು ಮತ್ತು ಉಳಿದ ದೇಶಗಳ ಯುವಕರ ಸರಿಸಮಾನರಾಗಿ ಹೊರಹೊಮ್ಮಲು ಕೈಗೊಳ್ಳುತ್ತಿರುವ ಸ್ತುತ್ಯಾರ್ಹ ಕಾರ್ಯ.

‘ಮುದ್ರಿತ ಪಠ್ಯಪುಸ್ತಕಗಳೇ ಇರಲಿ’ ಎಂಬ ಸ್ವೀಡನ್ ದೇಶದ ಈಗಿನ ನಿರ್ಣಯ ಸ್ವಾಗತಾರ್ಹ. ಅನ್ಯ ದೇಶಗಳೂ ಈ ದಿಶೆಯಲ್ಲಿ ಚಿಂತನೆ ಮಾಡುತ್ತಿರುವಂತೆ ಭಾಸವಾಗುತ್ತಿದೆ. ನಮ್ಮ ದೇಶದಲ್ಲಿ ಇದರ ಪರಿಣಾಮ ಮುಂದೆ ಆಗಬಹುದೇ ಎಂಬುದನ್ನು ಕಾಲವೇ ನಿರ್ಣಯಿಸಬೇಕು.

**ಡಾ. ಬೆಳವಾಡಿ ಕೃ. ಪ್ರಭಾಕರ್**
ಸಂಪಾದಕರು

# ಇಲ್ಲಿಯವರೆಗೆ ನಡೆದ ಕಾರ್ಯಕ್ರಮಗಳು



## ದಿನಾಂಕ ೦೫/೦೨/೨೦೨೫ ಬುಧವಾರ ಸಂಜೆ ೨೦೨೫ನೇ ಕಲಿಕಾ ವರ್ಷದ ‘ಹಳಗನ್ನಡ ಕಾವ್ಯ ರಸಗ್ರಹಣ’ ತರಗತಿಗಳ ಉದ್ಘಾಟನೆ ಆಯಿತು.

ಪ್ರಾಸ್ತಾವಿಕ ಭಾಷಣ ಮಾಡುತ್ತಾ ಬಿ.ಎಂ.ಶ್ರೀ. ಪ್ರತಿಷ್ಠಾನ ಹಸ್ತಪ್ರತಿ ವಿಭಾಗದ ಸಂಯೋಜಕರಾದ ಶ್ರೀ ಗುರುಪ್ರಸಾದ್ ಅವರು ಇದು ಸತತವಾಗಿ ನಡೆದುಬಂದ ೨೬ನೇ ವರ್ಷದ ತರಗತಿ ಎಂದು ತಿಳಿಸಿದರು.

ಈ ವರ್ಷದ ತರಗತಿಯಲ್ಲಿನ ವಿದ್ಯಾರ್ಥಿ ಶ್ರೀ ಮಾರುತಿ ರಾಮ್ ಅವರು ಸ್ವಾಗತ ಗೀತೆ ಹಾಡಿದರು.

ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಸ್ವಾಗತ ಮಾಡುತ್ತಾ, ಹಳಗನ್ನಡ ಮತ್ತು ಹೊಸಗನ್ನಡಕ್ಕೆ ಒಂದು ಅನ್ಯೋನ್ಯ ಕೊಂಡಿ ಇದೆ. ಇತರೇ ಯಾವುದೇ ಸಂಸ್ಥೆಗಳು ನಡೆಸುವ ಹಳಗನ್ನಡ ತರಗತಿಗಳಿಗಿಂತ ನಮ್ಮ ತರಗತಿಗಳು ಅತೀ ಹೆಚ್ಚು ವಿದ್ಯಾರ್ಥಿಗಳನ್ನು ಆಕರ್ಷಿಸುತ್ತಿದೆ. ಇಂದಿನಿಂದ ಪ್ರಾರಂಭವಾಗುವ ಈ ತರಗತಿಗಳಿಗೆ ಯುವಕರಿಂದ ಹಿಡಿದು ಹಿರಿಯ ನಾಗರಿಕರವರೆಗೆ ಎಪ್ಪತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಇದ್ದಾರೆ. ಇದಕ್ಕೆ ಕಾರಣ ಸಮಂಜಸ ಪಠ್ಯಗಳ ಆಯ್ಕೆ, ಕಲಿಸುವಿಕೆಯಲ್ಲಿನ ಗುಣಮಟ್ಟ, ನುರಿತ, ಪರಿಣಿತ ಶಿಕ್ಷಕ ವೃಂದ, ಪ್ರತ್ಯಕ್ಷ ಮತ್ತು ಪರೋಕ್ಷ ಅಂತರ್ಜಾಲ ಅವಲಂಬಿತ ತರಗತಿಗಳು ಎಂದರು. ಈ ಬಾರಿ ವಿಶೇಷವಾಗಿ ನಡುಗನ್ನಡ, ಶಾಸನಗಳ ಅಧ್ಯಯನ ಮುಂತಾದವುಗಳನ್ನು ಪಠ್ಯಕ್ರಮದಲ್ಲಿ ಅವಶ್ಯಕತೆಗೆ ತಕ್ಕಂತೆ ಅಳವಡಿಸಲಾಗಿದೆ. ಹೀಗಾಗಿ ಹಳಗನ್ನಡ ಚೈತನ್ಯಮಯವಾಗಿ, ಚೇತೋಹಾರಿಯಾಗಿ ವಿದ್ಯಾರ್ಥಿಗಳಿಗೆ ಹಳಗನ್ನಡದ ಪಂಪನಿಂದ ಹಿಡಿದು ಹೊಸಗನ್ನಡದ ಕುವೆಂಪು ಅವರ ತನಕ ಲಭಿಸಲಿದೆ ಎಂದರು.

ತರಗತಿಗಳ ಉದ್ಘಾಟನಾ ಮಾತುಗಳನ್ನು ಆಡುತ್ತಾ ಸಂಸ್ಥೆಯ ಗೌರವಾಧ್ಯಕ್ಷರಾದ ಡಾ. ಪಿ.ವಿ. ನಾರಾಯಣ ಅವರು ಈ ಹಳಗನ್ನಡ, ನಡುಗನ್ನಡ, ನವ್ಯಕನ್ನಡ ಎಂಬುದನ್ನು ನಿಖರವಾಗಿ ಸ್ಪಷ್ಟೀಕರಿಸುವುದು ಕಷ್ಟ ಇದರ ಬಗ್ಗೆ ಜಿಜ್ಞಾಸೆ ಇದೆ. ಒಂಭತ್ತನೇ ಶತಮಾನದ ಕನ್ನಡ ಕಾವ್ಯಗಳಲ್ಲಿ ಹಳಗನ್ನಡ ಎಂಬ ಪದ ಬಳಸಲಾಗಿದೆ. ಅಂದಮೇಲೆ ಅದಕ್ಕೂ ಮೊದಲು ಕನ್ನಡ ಭಾಷೆಯನ್ನು ಬಳಸಲಾಗಿತ್ತು ಎಂಬ ಭಾವನೆ ಬರುವುದು ಸಹಜ. ಮೂರನೇ ಶತಮಾನದಲ್ಲಿಯೂ ಅಲ್ಲಲ್ಲಿ ಕನ್ನಡದ ಬರಹ ಇರಬಹುದು ಅಲ್ಲವೇ ಎಂದರು. ಈ ಗೊಂದಲದಲ್ಲಿ ಸಿಕ್ಕಿಕೊಳ್ಳದೆ ನಾವಿರುವಾಗ ಬಳಸುವುದು ನಮ್ಮ ಕಾಲದ ಕನ್ನಡ. ನಮಗಿಂತ ಹಿಂದಿನದು ಹಳಗನ್ನಡ ಮತ್ತು ನಮ್ಮ ನಂತರ ಬಳಸುವುದು ಹೊಸಗನ್ನಡ ಎನ್ನುವುದು ಜಾಣತನ ಎಂದರು. ಕನ್ನಡ ಕನ್ನಡವೇ. ಬಳಕೆಯ ರೂಪ, ಸ್ವರೂಪ ಬದಲಾಗುತ್ತಿದೆ ಎಂದರು. ಇಪ್ಪತ್ತಾರು ವರ್ಷಗಳಿಂದ ನಡೆಯುತ್ತಿರುವ ಈ ಹಳಗನ್ನಡ ತರಗತಿಗಳಿಗೆ ತೆರೆಮರೆಯಲ್ಲಿ ಶ್ರಮಿಸಿ, ಬೇಂದ್ರೆಯವರು ಹೇಳಿದಂತೆ ‘ಯುಗ ಯುಗಾದಿ ಕಳೆದರೂ ಹೊಸತು ಹೊಸತು ತರುತಿದೆ’ ಎನ್ನುವಂತೆ ಪ್ರತಿ ಪಠ್ಯಕ್ರಮದಲ್ಲೂ ನಾವೀನ್ಯತೆಯನ್ನು ತಮ್ಮ ಅನುಭವದ ಬಲದಿಂದ ತರುತ್ತಿರುವವರು ಡಾ. ಕೆ.ಆರ್.ಗಣೇಶ್ ಅವರು ಎನ್ನುತ್ತಾ ಶ್ಲಾಘಿಸಿದರು.

ವಿದ್ಯಾರ್ಥಿಗಳ ಪರವಾಗಿ ಶ್ರೀ ಮಾರುತಿ ರಾಮ್ ಮತ್ತು ಶ್ರೀ ನರಸಿಂಗರಾವ್ ಅವರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

ಡಾ. ಕೆ.ಆರ್. ಗಣೇಶ್ ಅವರು ವಿದ್ಯಾರ್ಥಿಗಳಿಗೆ ಹಳಗನ್ನಡವನ್ನು ಹೇಗೆ ಕಲಿಯಬೇಕು, ನಿಮಗೆ ಬೋಧನೆ ಮಾಡುವ ಅನುಭವಿ ಗುರುಗಳ ಸಮರ್ಪಕ ಲಾಭವನ್ನು ಹೇಗೆ ಪಡೆಯಬೇಕು ಅನ್ನುವ ನಿಟ್ಟಿನಲ್ಲಿ ಕೆಲವು ಕಿವಿಮಾತುಗಳನ್ನು ಹೇಳಿದರು.

ಪ್ರೊ. ಚಂದ್ರಶೇಖರ ನಾದೂರು ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಕೆಲವು ನುಡಿಗಳನ್ನು ಆಡಿದರು. ನಿಮಗೆ ಕಲಿಸುವ ಗುರುಗಳಲ್ಲಿ ಪಠ್ಯವಿದ್ದರೂ ಅವರು ಕಲಿಸುವ ರೀತಿಯಲ್ಲಿ ವೈವಿಧ್ಯತೆ ಇರುತ್ತದೆ. ಒಬ್ಬೊಬ್ಬರೂ ವಿಭಿನ್ನ ಅಂಶಗಳಿಗೆ ಒತ್ತು ಕೊಟ್ಟು ವಿವರಿಸುತ್ತಾರೆ. ಅವರು ಆ ಕಾವ್ಯವನ್ನು ಗುರುತಿಸುವಾಗ ಅವರದೇ ದೃಷ್ಟಿಕೋನ ಇರುತ್ತದೆ. ಸಾಹಿತ್ಯವೇ ಹಾಗೆ. ಅದು ಕಲ್ಪನಾತೀತ, ಭಾವನಾತೀತ. ಆದ್ದರಿಂದ ಇದರ ಲಾಭವನ್ನು ವಿದ್ಯಾರ್ಥಿಗಳು ತರಗತಿಗಳಲ್ಲಿ ಇದ್ದು ಗುರುಗಳ ಸಂಗಡ ವಿಚಾರ ವಿನಿಮಯ ಮಾಡಿ ಕಲಿಯುವುದು ಒಳಿತು ಎಂದರು.

ಅಧ್ಯಕ್ಷೀಯ ಮಾತುಗಳನ್ನಾಡುತ್ತಾ ಡಾ.ಬೈರಮಂಗಲ ರಾಮೇಗೌಡ ಅವರು ಇಪ್ಪತ್ತೈದು ವರ್ಷಗಳ ಹಿಂದೆ ಆಗಿನ ಅಧ್ಯಕ್ಷರಾಗಿದ್ದ ಬಸವಾರಾಧ್ಯ ಅವರು ಈ ತರಗತಿಗಳನ್ನು ಆರಂಭಿಸಿದ ಉದ್ದೇಶಗಳನ್ನು ತಿಳಿಸಿದರು. ಕ್ರಮೇಣ ಅವಶ್ಯಕತೆಯ ಆಧಾರದ ಮೇಲೆ ಮತ್ತು ವಿದ್ಯಾರ್ಥಿಗಳು ಹೇಗೆ ಸ್ಪಂದಿಸುತ್ತಿದ್ದಾರೆ, ಅವರ ಅನಿಸಿಕೆ, ಕಲಿಕೆಯ ಅವಶ್ಯಕತೆಗಳೇನು ಎಂಬುದನ್ನು ಗಣನೆಗೆ ತೆಗೆದುಕೊಂಡು ನಂತರದ ಅಧ್ಯಕ್ಷರುಗಳು ಪಠ್ಯಕ್ರಮ ಮತ್ತು ಕಲಿಸುವ ರೀತಿಯಲ್ಲಿ ತಂದ ಬದಲಾವಣೆಗಳ ಒಂದು ಹಿನ್ನೋಟವನ್ನು ಕೊಟ್ಟರು. ಇಲ್ಲಿಗೆ ಬರುವ ಅನೇಕ ವಿದ್ಯಾರ್ಥಿಗಳ ಹಿನ್ನೆಲೆ ಸಾಹಿತ್ಯೇತರವಾಗಿದ್ದರೂ, ಅವರು ಪ್ರೌಢ ಶಾಲೆಯಲ್ಲಿ ಈ ಹಳಗನ್ನಡ ಕಾವ್ಯಗಳ ರುಚಿಯನ್ನಷ್ಟೇ ಬಲ್ಲವರಾಗಿದ್ದರು. ಅದರ ಮೇಲಿನ ಪ್ರೀತಿ ಮತ್ತು ಆಸಕ್ತಿಯಿಂದ ಈಗ ಅದರ ರಸದ ಸ್ವಾದವನ್ನು ಸಂಪೂರ್ಣವಾಗಿ ಪಡೆಯಬೇಕೆಂಬ ಮಹಾದಾಸೆಯಿಂದ ಬಂದಿರುವುದು ಉಂಟು. ನಿಮ್ಮೆಲ್ಲರಿಗೂ ಅತ್ಯುತ್ತಮ ರಸಗ್ರಹಣ ಮಾಡಿಸುವ ಜವಾಬ್ದಾರಿ ನಮ್ಮದು ಎಂದರು.

ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.

## ದಿನಾಂಕ ೦೬/೦೨/೨೦೨೫ ಗುರುವಾರ ಸಂಜೆ ಡಾ. ಎಂ.ಎ. ಜಯಚಂದ್ರ ದತ್ತಿ ಆಶ್ರಯದಲ್ಲಿ ‘ಮಹಾಕವಿ ಚಂದ್ರಸಾಗರ ವರ್ಣಿಯ ಜೀವನ ಮತ್ತು ಕೃತಿಗಳು’ ಎಂಬ ವಿಷಯದ ಮೇಲೆ ಕನ್ನಡ ಉಪನ್ಯಾಸಕರು ಮತ್ತು ಸಂಶೋಧಕರು ಆದ ಡಾ. ಎಸ್. ಗಂಗಾಂಬಿಕೆ ಗೋವರ್ಧನ ಅವರ ಉಪನ್ಯಾಸ ನಡೆಯಿತು.



ಹಸ್ತಪ್ರತಿ ವಿಭಾಗದ ಸಂಯೋಜಕರಾದ ಶ್ರೀ ಬಿ.ಎಸ್.ಗುರುಪ್ರಸಾದ್ ಅವರು ಸ್ವಾಗತ ಮಾಡುತ್ತಾ ದತ್ತಿಯ ಬಗ್ಗೆ ಕೆಲವು ಕನ್ನಡ ಸಾಹಿತ್ಯದ ಅವಶ್ಯಕ ವಿಷಯಗಳನ್ನು ಪ್ರಸ್ತುತಪಡಿಸಿದರು.

**‘ಚಂದ್ರಸಾಗರ ವರ್ಣಿ ಒಬ್ಬ ಮಹಾಕವಿ’**

ಡಾ. ಎಸ್. ಗಂಗಾಂಬಿಕೆ ಗೋವರ್ಧನ ಅವರು ಚಂದ್ರಸಾಗರ ವರ್ಣಿಯ ಕೃತಿಗಳ ಬಗ್ಗೆ ಉಪನ್ಯಾಸ ನೀಡಿದರು. ಜೈನ ಸಾಹಿತ್ಯ ಕನ್ನಡ ಸಾಹಿತ್ಯದ ಒಂದು ಪ್ರಮುಖ ಧಾರೆ. ೧೮ನೇ ಶತಮಾನದಲ್ಲಿ ಜೈನ ಕವಿ ಚಂದ್ರಸಾಗರ ವರ್ಣಿ ಈ ಸಾಹಿತ್ಯಕ್ಕೆ ತನ್ನದೇ ಆದಂತ ಅಪರೂಪದ ಕೊಡುಗೆಯನ್ನು ನೀಡಿದ್ದಾನೆ. ಈ ಕವಿ ತೆರೆಯ ಮರೆಯಲ್ಲಿದ್ದರೂ ನಲವತ್ತಾರು ಉತ್ತಮ ಕೃತಿಗಳ ರಚನಕಾರ. ಆತ ದೀಕ್ಷೆ ಪಡೆದು ಸನ್ಯಾಸಿಯಾದ್ದರಿಂದ ಚಂದ್ರಸಾಗರ ಜೊತೆಗೆ ವರ್ಣಿ ಎಂಬುದು ಸೇರಿಕೊಂಡಿದೆ. ಚಂದ್ರಸಾಗರ ವರ್ಣಿಯ ಬದುಕು ಬರಹದ ಮೇಲೆ ನಾಡೋಜ ಹಂಪನಾ ಮತ್ತು ಶ್ರೀ ಎಸ್.ವೈ. ಸೋಮಶೇಖರ ಅವರು ಆಳವಾದ ಅಧ್ಯಯನ ಮಾಡಿದ್ದಾರೆ.

ಚಂದ್ರಸಾಗರ ವರ್ಣಿಯ ಮಹತ್ಸಾಧನೆಯಲ್ಲಿ ‘ಜಿನ ರಾಮಾಯಣ’ವೂ ಒಂದು. ಕರ್ನಾಟಕದ ಅನೇಕ ಕಡೆಗಳಲ್ಲಿರುವ ಜೈನ ಕ್ಷೇತ್ರಗಳನ್ನು ಸುತ್ತಿದ್ದರಿಂದ ಮತ್ತು ಜೈನ ಗುರುಗಳ ಆಶೀರ್ವಾದ ಇದ್ದುದರಿಂದ ಚಂದ್ರಸಾಗರ ವರ್ಣಿಗೆ ಉತ್ಕೃಷ್ಟ ಸಾಹಿತ್ಯದ ರಚನೆಗೆ ಪ್ರೇರಣೆ ಸಿಕ್ಕಂತೆ ಅನಿಸುತ್ತದೆ. ಗಂಜಾಮ್ ಎಂಬ ಊರಿನಲ್ಲಿ ಇದ್ದಾಗ ಹಲವು ಕೃತಿಗಳು ರಚನೆಯಾಗಿವೆ. ಇವರ ಕೃತಿಗಳಲ್ಲಿ ನಾವು ಕಾಣುವುದು

ಸಾವಿರಕ್ಕೂ ಅಧಿಕ ಪದ್ಯಗಳು. 'ಜಿನ ಭಾರತ', 'ಜಿನ ರಾಮಾಯಣ' ಇದಕ್ಕೆ ನಿದರ್ಶನ. ಗಾತ್ರದ ದೃಷ್ಟಿಯಿಂದಷ್ಟೇ ಅಲ್ಲದೇ ವಿಷಯಗಳ ಮಹತ್ವವೇ ಇವರ ಸಾಹಿತ್ಯದ ಹಿರಿಮೆ.

ಇಪ್ಪತ್ತೆಂಟು ಪ್ರಕಟಿತ ಕೃತಿಗಳ ಜೊತೆಗೆ ಅಪ್ರಕಟಿತ ಕೃತಿಗಳೂ ಇವೆಯೆಂದು ಸಂಶೋಧನೆಯಿಂದ ತಿಳಿದುಬರುತ್ತದೆ. ಈ ಕೃತಿಗಳು ವೈವಿಧ್ಯತೆಯಿಂದ ತುಂಬಿದ್ದು ಮಹಾಕವಿಗಳ ಸಾಲಿನಲ್ಲಿ ಗುರುತಿಸಲು ಯೋಗ್ಯರನ್ನಾಗಿ ಮಾಡಿವೆ. 'ಜಿನ ರಾಮಾಯಣ', 'ಜಿನ ಭಾರತ' ಮತ್ತು 'ಜಿನ ಪುರಾಣ' ಎಂಬ ಬೃಹತ್ ಗ್ರಂಥಗಳನ್ನು ಬರೆದ ಏಕೈಕ ಕನ್ನಡದ ಕವಿ ಇವರು. ಇದು ನಿಜವಾಗಿಯೂ ಮೆಚ್ಚಲೇ ಬೇಕಾದ ಸಾಧನೆ.

ಶ್ರೀ ರಾಮಾಯಣದಲ್ಲಿ ದೇವಿ ಶಾರದೆಯನ್ನು ವರ್ಣಿಸುವ ರೀತಿಯಂತೂ ಅಪೂರ್ವವಾದದ್ದು ಎನ್ನುತ್ತಾ ಚಂದ್ರಸಾಗರ ವರ್ಣಿಯ ಪದ್ಯದ ಕೆಲವು ಸಾಲುಗಳನ್ನು ಓದಿ ಉಲ್ಲೇಖಿಸಿದರು. ಬಿಜ್ಜಳರಾಯನ ಸಾಧನೆಯನ್ನು ಬರೆದ ಚಂದ್ರಸಾಗರ ವರ್ಣಿಗೆ ಇತಿಹಾಸದ ಜ್ಞಾನ ಮತ್ತು ಆಸಕ್ತಿ ಇತ್ತು ಎಂಬುದು ಅವನ ಕೃತಿಗಳಿಂದ ಕಾಣುತ್ತದೆ. ಈತನ ಕಾವ್ಯಗಳಲ್ಲಿ ಮಹಾಪಾತ್ರಗಳಿವೆ, ಮಹಾಸತ್ವಗಳಿವೆ, ಮಹಾನಿರೂಪಣೆ ಇದ್ದು ಈತನನ್ನು ಮಹಾಕವಿಗಳ ಸ್ಥಾನದಲ್ಲಿ ನಿಲ್ಲಿಸಿವೆ ಎನ್ನುತ್ತಾ ತಮ್ಮ ಉಪನ್ಯಾಸವನ್ನು ಕೇಳಿ ಮೆಚ್ಚಿದ ಸಭಿಕರಿಂದ ಕರತಾಡನಗಳನ್ನು ಪಡೆದರು.

ನಂತರ ಗಂಗಾಂಬಿಕೆಯವರ ಗುರುಗಳಾದ ಮತ್ತು ಇಂದಿನ ದತ್ತಿಯ ರೂವಾರಿಗಳಾದ ಡಾ. ಜಯಚಂದ್ರ ಅವರು ಚಂದ್ರಸಾಗರ ವರ್ಣಿಯ ಬಗೆಗೆ ಇನ್ನಷ್ಟು ಮಾಹಿತಿಯನ್ನು ಸಭಿಕರಿಗೆ ನೀಡಿದರು.

ಅಧ್ಯಕ್ಷೀಯ ಮಾತುಗಳನ್ನಾಡುತ್ತಾ ಡಾ.ಬೈರಮಂಗಲ ರಾಮೇಗೌಡ ಅವರು ಡಾ. ಎಸ್. ಗಂಗಾಂಬಿಕೆ ಗೋವರ್ಧನ ಅವರು ಇಂದು ವಿದ್ವತ್ಪೂರ್ಣ ಉಪನ್ಯಾಸವನ್ನು ನೀಡಿದ್ದಾರೆ. ಅವರ ಧ್ವನಿ ಮತ್ತು ನೀಡಿದ ಮಾಹಿತಿಗಳು ಅರ್ಥಪೂರ್ಣವಾಗಿ, ಸ್ವಾರಸ್ಯಕರವಾಗಿ ಇತ್ತು. ಪ್ರಾಚೀನ ಸಾಹಿತ್ಯದಿಂದ ಹಿಡಿದು ಆಧುನಿಕ ಸಾಹಿತ್ಯ ರಚನೆಗಳವರೆಗೆ ಕನ್ನಡ ಭಾಷೆ ತನ್ನ ಸೌಂದರ್ಯವನ್ನು ಮತ್ತು ಐಶ್ವರ್ಯವನ್ನು ಪ್ರದರ್ಶಿಸುತ್ತಲೇ ಬಂದಿದೆ. ಅನೇಕ ಸಂದರ್ಭಗಳಲ್ಲಿ ಘನತೆವೆತ್ತ ಸಾಹಿತ್ಯವನ್ನು ಕವಿಗಳು ನೀಡಿದ್ದಾರಾದರೂ, ಕಾರಣಾಂತರದಿಂದ ಅವರು ಎಲೆಮರೆಯ ಹಣ್ಣಿನಂತೆ ಇದ್ದಾರೆ. ಅವರ ಕಾವ್ಯಗಳೂ ಗಮನಕ್ಕೆ ಬಾರದೇ ಇದ್ದುಬಿಟ್ಟಿವೆ. ಜೈನ ಕವಿ ಚಂದ್ರಸಾಗರ ವರ್ಣಿ ಈ ಸಾಲಿನಲ್ಲಿ ನಿಲ್ಲುವ ಒಬ್ಬ ಮಹಾಕವಿ ಎಂಬುದನ್ನು ಉಪನ್ಯಾಸಕಿ ಡಾ. ಗಂಗಾಂಬಿಕೆ ಗೋವರ್ಧನ ಅವರು ನಾಲ್ಕು ಮಹಾಕಾವ್ಯಗಳ ಗಾತ್ರ ಮತ್ತು ಗುಣಮಟ್ಟವನ್ನು ಹೆಕ್ಕಿ ತೆಗೆದು ನಮ್ಮ ಮುಂದೆ ನಿರೂಪಿಸುವಲ್ಲಿ ಯಶಸ್ವಿಯಾಗಿದ್ದಾರೆ. ಇದರಲ್ಲಿ 'ಯಶೋಧರ ಚರಿತೆ'ಯೂ ಸೇರಿದೆ ಎಂದರು.

ಗೌರವ ಕೋಶಾಧಿಕಾರಿ ಶ್ರೀ ಚಂದ್ರಶೇಖರ ನಾದೂರು ಅವರು ವಂದನಾರ್ಪಣೆ ಮಾಡಿದರು.

## ದಿನಾಂಕ ೦೯ ಫೆಬ್ರುವರಿ ೨೦೨೫ ಭಾನುವಾರ ನಡೆದ ವಿಶೇಷ ಕಾರ್ಯಕ್ರಮ ಪ್ರೊ. ಎಲ್.ಎಸ್. ಶೇಷಗಿರಿರಾವ್ ಶತಮಾನೋತ್ಸವ ಸಮಾರಂಭದ ಉದ್ಘಾಟನೆ ಮತ್ತು ಎಲ್.ಎಸ್.ಎಸ್. ಸಾಹಿತ್ಯ ಕುರಿತ ವಿಚಾರಗೋಷ್ಠಿ ಹಾಗೂ ಪ್ರೊ. ಎಲ್.ಎಸ್. ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ, ಶ್ರೀ. ವಿ. ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ ಪ್ರದಾನ ಕಾರ್ಯಕ್ರಮ



ದಿನಾಂಕ ೦೯/೦೨/೨೦೨೫ ಭಾನುವಾರ ಬೆಳಗ್ಗೆ 'ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರ ಶತಮಾನೋತ್ಸವ'ದ ಅಂಗವಾಗಿ 'ವಿಚಾರ ಸಂಕಿರಣ ಮತ್ತು ಪ್ರಶಸ್ತಿ ಪ್ರದಾನ' ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಮುಖ್ಯ ಅತಿಥಿಗಳಾದ ಪ್ರೊ. ಎಚ್.ಎಸ್.ರಾಘವೇಂದ್ರರಾವ್ ವಿಧ್ಯುಕ್ತವಾಗಿ ಜ್ಯೋತಿ ಬೆಳಗಿಸಿ ಶತಮಾನೋತ್ಸವ ಸಮಾರಂಭದ ಉದ್ಘಾಟನೆ ಮಾಡಿದರು.

ಪ್ರೊ. ಎಚ್.ಎಸ್.ರಾಘವೇಂದ್ರರಾವ್ ಅವರು ಉದ್ಘಾಟನೆಯನ್ನು ಮಾಡಿ, ಎಸ್.ಆರ್. ವಿಜಯಶಂಕರ್ ಅವರಿಗೆ 'ಪ್ರೊ. ಎಲ್.ಎಸ್. ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿಯ'ನ್ನು ಮತ್ತು ಡಾ. ಬಾಬು ಕೃಷ್ಣಮೂರ್ತಿಯವರಿಗೆ 'ವಿ. ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ'ಯನ್ನು ಪ್ರದಾನ ಮಾಡಿದರು.

ಅಪ್ರತಿಮ ಶಿಕ್ಷಕ, ಅಗ್ರಗಣ್ಯ ಸಾಹಿತಿ, ಸಾಹಿತ್ಯೋಪಾಸಕ, ಬಿ.ಎಂ.ಶ್ರೀ. ಪ್ರತಿಷ್ಠಾನದ ಸ್ಥಾಪಕ ಸದಸ್ಯ, ಕಾರ್ಯಕಾರಿ ಸಮಿತಿಯ ಸಕ್ರಿಯ ಸದಸ್ಯ, ಮಾಜಿ ಅಧ್ಯಕ್ಷರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರ ಜನ್ಮ ಶತಮಾನೋತ್ಸವ ಸಮಾರಂಭದ ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ.ಬೈರಮಂಗಲ ರಾಮೇಗೌಡ ಅವರು ವಹಿಸಿದ್ದರು. ವೇದಿಕೆಯ ಮೇಲೆ ಮುಖ್ಯ ಅತಿಥಿಗಳಾದ ಹಿರಿಯ ಸಾಹಿತಿ, ಖ್ಯಾತ ವಿಮರ್ಶಕ ಪ್ರೊ. ಎಚ್.ಎಸ್. ರಾಘವೇಂದ್ರರಾವ್, ಪ್ರತಿಷ್ಠಾನದ ಅಧ್ಯಕ್ಷ ಮತ್ತು ಇಂದಿನ ಕಾರ್ಯಕ್ರಮದ ಅಧ್ಯಕ್ಷ ಡಾ.ಬೈರಮಂಗಲ ರಾಮೇಗೌಡ, ನಿಕಟಪೂರ್ವ ಅಧ್ಯಕ್ಷ ಮತ್ತು ಶತಮಾನೋತ್ಸವ ಸಂಕಿರಣ ಸಮಿತಿಯ ಸದಸ್ಯರೂ ಆದ ಪ್ರೊ.ಡಾ.ಆರ್.ಲಕ್ಷ್ಮೀನಾರಾಯಣ ಉಪಸ್ಥಿತರಿದ್ದರು.

ಪ್ರೊ. ಎಲ್.ಎಸ್. ಶೇಷಗಿರಿರಾವ್ ಮತ್ತು ಶ್ರೀ ವಿ. ನಾಗರಾಜರಾವ್ ಅವರ ಭಾವಚಿತ್ರಕ್ಕೆ ಪುಷ್ಪ ನಮನಗಳನ್ನು ಸಲ್ಲಿಸಲಾಯಿತು.

ಪ್ರತಿಷ್ಠಾನದ ಗೌರವ ಕೋಶಾಧಿಕಾರಿ ಪ್ರೊ.ಚಂದ್ರಶೇಖರ ನಾದೂರು ಪ್ರಾಸ್ತಾವಿಕ ಭಾಷಣ ಮಾಡಿ ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರ ಬದುಕು, ಬರಹ, ಕಾರ್ಯಚಟುವಟಿಕೆಗಳ ಒಂದು ವಿಹಂಗಮ ನೋಟವನ್ನು ನೀಡಿದರು.

ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ವೇದಿಕೆಯ ಮೇಲಿನ ಗಣ್ಯರನ್ನು, ಪ್ರೊ.ಎಲ್.ಎಸ್.ಎಸ್. ಅವರ ಧರ್ಮಪತ್ನಿ ಶ್ರೀಮತಿ ಭಾರತಿ, ವಿ. ನಾಗರಾಜರಾವ್ ಅವರ ಮಗಳು ಶ್ರೀಮತಿ ರಾಜೇಶ್ವರಿ ಕೃಷ್ಣ ಅವರನ್ನೂ, ಮಾಧ್ಯಮದವರನ್ನೂ ಮತ್ತು ಪರೋಕ್ಷವಾಗಿ ವೀಕ್ಷಿಸುತ್ತಿರುವ ಸಭಿಕರಿಗೆಲ್ಲರಿಗೂ ಸ್ವಾಗತ ಕೋರಿದರು.

**ಪ್ರೊ. ಎಲ್. ಎಸ್. ಶೇಷಗಿರಿರಾವ್, ಅವರೊಬ್ಬ ಸವ್ಯಸಾಚಿ**

ಡಾ. ಆರ್.ಲಕ್ಷ್ಮೀನಾರಾಯಣ ಅವರು ಆಶಯದ ಮಾತುಗಳನ್ನಾಡುತ್ತಾ ಪ್ರೊ. ಎಲ್.ಎಸ್. ಶೇಷಗಿರಿರಾವ್ ಅವರು ಹಲವು ವರ್ಷಗಳ ಹಿಂದೆ ನಮ್ಮೊಡನೆ ಲವಲವಿಕೆಯಿಂದ ಓಡಾಡಿಕೊಂಡು ಕನ್ನಡ ಸಾಹಿತ್ಯ ಸೇವೆಯಿಂದ ಸಂಭ್ರಮಿಸಿದವರು. ವೃತ್ತಿಯಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿದ್ದರೂ ಬಿ.ಎಂ.ಶ್ರೀ. ಅವರ ಪ್ರೇರಣೆಯಿಂದ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ, ಅದರ ಬೆಳವಣಿಗೆಗೆ, ಅದರ ವೈಶಾಲ್ಯತೆಗೆ ತಮ್ಮನ್ನು ಸಂಪೂರ್ಣವಾಗಿ ತೊಡಗಿಸಿಕೊಂಡು ಜೊತೆಗೆ ಉಳಿದವರನ್ನೂ ಸಂಘಟಿಸಿ ಕಾರ್ಯಪ್ರವೃತ್ತರಾದ ಧೀಮಂತ ವ್ಯಕ್ತಿ, ಕನ್ನಡದ ಶಕ್ತಿ, ಅವರೊಬ್ಬ ಸವ್ಯಸಾಚಿ ಎಂದರು.

**ಎಲ್.ಎಸ್.ಎಸ್. ಅವರನ್ನು 'ಮಂದೆಯಲಿ ಒಂದಾಗದೆ' ನೋಡೋಣ**

ಉದ್ಘಾಟನಾ ಭಾಷಣ ಮಾಡಿದ ಪ್ರೊ.ಎಚ್.ಎಸ್.ರಾಘವೇಂದ್ರರಾವ್ ಅವರು ಪ್ರಾರಂಭದಲ್ಲಿ ಸಭೆಯಲ್ಲಿ ಹೆಚ್ಚಾಗಿ ಹಿರಿಯರೆ ಇದ್ದು ಕಿರಿಯರ ಸಂಖ್ಯೆ ಕಡಿಮೆ ಇರುವುದು ಕನ್ನಡಕ್ಕೆ ಮುಂದೆ ಬರಬಹುದಾದ ಕಷ್ಟಕಾಲಕ್ಕೆ 'ಕನ್ನಡಿ' ಅಂದುಕೊಳ್ಳೋಣ ಎಂದು ಮಾರ್ಮಿಕವಾಗಿ ನುಡಿದರು. ಪ್ರೊ. ಎಲ್.ಎಸ್.ಎಸ್. ಅವರ ಬಗ್ಗೆ ಹೇಳಬೇಕೆಂದರೆ, ಇಂದಿನ ಪರಿಸ್ಥಿತಿಯಲ್ಲಿ ನಕ್ಷತ್ರ ಮತ್ತು ನಂದಾದೀಪದ ಉದಾಹರಣೆಯನ್ನು ತೆಗೆದುಕೊಳ್ಳಬಹುದು. ಅಂದಿನವರು ಮಾಡಿದ ಸತ್ಕಾರ್ಯಗಳನ್ನು ಇಂದಿನವರು ನೋಡುವ ರೀತಿಯೇ ಬೇರೆ. ಅವರು ಏನು ಮಾಡಿದರು ಅನ್ನುವುದಕ್ಕಿಂತ ಅವರು ನಮಗೆ ಏನು ಮಾಡಿಕೊಟ್ಟರು ಎಂಬುದೇ ಪ್ರಮುಖ. ಇಂದಿನ ಸಮಾಜ ಕೇವಲ ಬಿರುದು ಬಾವಲಿಗಳನ್ನು ಗಳಿಸಿದ ವ್ಯಕ್ತಿಗಳಿಗೆ ಬಹುಪರಾಕ್ ಹೇಳುತ್ತಾ ಅವರನ್ನು 'ನಕ್ಷತ್ರ'ಗಳನ್ನಾಗಿ ಮಾಡಿ ತನ್ನ ಪಾಡಿಗೆ ಸೌಮ್ಯವಾಗಿ 'ನಂದಾದೀಪ'ದ ತರಹ ಬೆಳಕನ್ನು ಚೆಲ್ಲಿದ ವ್ಯಕ್ತಿಗಳನ್ನು ಗಮನಿಸುವುದೇ ಇಲ್ಲ. ನಾವಾದರೂ

ಎಲ್.ಎಸ್.ಎಸ್. ಅವರನ್ನ 'ಮಂದೆಯಲಿ ಒಂದಾಗದೆ' ನೋಡೋಣ. ಇಂದು ಶತಮಾನೋತ್ಸವ ಮಾಡಿ ನಾಳೆಯೇ ಅವರನ್ನು ಮರೆಯುವುದು ಬೇಡ ಎಂದು ತಮ್ಮ ದುಗುಡವನ್ನು ವ್ಯಕ್ತಪಡಿಸಿದರು. ಪ್ರೊ. ಶೇಷಗಿರಿರಾವ್ ಅವರು ಏಕಮುಖಿಯಲ್ಲ ಬದಲಿಗೆ ಬಹುಮುಖಿ ವ್ಯಕ್ತಿ. ಬಿ.ಎಂ.ಶ್ರೀ.ಯವರ ಕನ್ನಡದಿಂದ ಹಿಡಿದು ಬದಲಾಗುತ್ತಾ ಬಂದ ಕನ್ನಡದ ಹರಿವನ್ನು ಯಾವಾಗಲೂ ವಿಶಾಲ ಹೃದಯದಿಂದ, 'ಒಂದು ಕೀಳು ಒಂದು ಮೇಲು' ಎನ್ನದೆ ಸಮಚಿತ್ತದಿಂದ ನೋಡಿ ವಿಮರ್ಶಿಸುತ್ತಿದ್ದ ಅಪರೂಪದ ವ್ಯಕ್ತಿ ಅವರು ಎಂದು ಹೇಳಿದರು. ಶೇಷಗಿರಿರಾವ್ ಅವರಲ್ಲಿ ಗಮನಿಸಬೇಕಾದ ಇನ್ನೊಂದು ವಿಷಯವೆಂದರೆ ಅವಕಾಶ ಸಿಕ್ಕಾಗಲೆಲ್ಲಾ ಉತ್ತಮವಾದುದನ್ನು ತಮ್ಮನ್ನು ಕಳೆದುಕೊಳ್ಳದೇ ಕಾರ್ಯರೂಪಕ್ಕೆ ತರುವುದು. ಅವರಿಗೆ ಒಪ್ಪಿಸಿದ ಕೆಲಸವನ್ನು ಕೊಟ್ಟ ಮಿತಿಯಲ್ಲಿ ಮಾಡಿಕೊಡುವುದು ಪ್ರೊ. ಎಲ್.ಎಸ್.ಎಸ್. ಅವರ ಧರ್ಮ. ಇದಕ್ಕೆ ಹಾಕಿಕೊಟ್ಟ ಒಂದೇ ವರ್ಷದಲ್ಲಿ ಹೊರತಂದ 'ಕಿರಿಯರ ಕರ್ನಾಟಕ' ಒಂದು ನಿದರ್ಶನ ಎಂದರು.

ನಂತರ ನಡೆದ ವಿಚಾರ ಸಂಕಿರಣದಲ್ಲಿ ಎಸ್.ಆರ್.ವಿಜಯಶಂಕರ್ ಮತ್ತು ಡಾ. ಟಿ.ಎನ್. ವಾಸುದೇವಮೂರ್ತಿಯವರು ತಮ್ಮ ವಿಚಾರಗಳನ್ನು ಮಂಡಿಸಿದರು.

### ವಿಚಾರಗೋಷ್ಠಿ

**'ಕನ್ನಡ ವಿಮರ್ಶೆಗೆ ಪ್ರೊ. ಎಲ್.ಎಸ್.ಎಸ್. ಅವರ ಕೊಡುಗೆ'**

ಆದಿಚುಂಚನಗಿರಿ ವಿಶ್ವವಿದ್ಯಾಲಯದ ಕನ್ನಡ ಪ್ರಾಧ್ಯಾಪಕರಾದ ಡಾ. ಕೆ.ಎನ್. ವಾಸುದೇವಮೂರ್ತಿ ಅವರು ತಮ್ಮ ಅನಿಸಿಕೆಗಳನ್ನು ಮಂಡಿಸುತ್ತಾ ಪ್ರೊ. ಎಲ್.ಎಸ್.ಎಸ್. ಅವರ ಶತಮಾನೋತ್ಸವದ ಅಂಗವಾಗಿ ಸರ್ಕಾರ ತರಬೇಕೆಂದಿರುವ ಸಮಗ್ರ ಸಾಹಿತ್ಯ ಸಂಪುಟದ ಸಂಪಾದಕೀಯ ಮಂಡಳಿಯ ಸದಸ್ಯನಾಗಿ ಕಾರ್ಯ ನಿರ್ವಹಿಸುವ ಸೌಭಾಗ್ಯ ನನಗೆ ದೊರೆಯಿತು. ಆಗ ನನಗೆ ತಿಳಿದಿದ್ದು ಶೇಷಗಿರಿರಾವ್ ಅವರು ಇನ್ನೂರ ಐವತ್ತು ವಿಮರ್ಶಾ ಗ್ರಂಥಗಳನ್ನು ರಚಿಸಿದ ಸಾಧಕ ಎಂದು. ಬಹು ಕಾಲದಿಂದಲೂ ಈ ವಿಮರ್ಶೆ ಅನ್ನುವುದು ನಡೆದು ಬರುತ್ತಿರುವ ಪ್ರಕ್ರಿಯೆ. ಶೇಷಗಿರಿರಾವ್ ಅವರು ವ್ಯಾಖ್ಯಾನ ಪರಂಪರೆಗೆ ಹತ್ತಿರದವರು ಎನ್ನಬಹುದು. ವ್ಯಾಖ್ಯಾನಗಳನ್ನು ಬರೆಯುವಾಗ ಅದರಲ್ಲಿ ಅನೇಕ ಬಗೆಗಳಿವೆ. ಅದೆಲ್ಲ ರೀತಿಗಳಲ್ಲೂ ಬರೆಯುವ ಪ್ರಭುತ್ವವನ್ನು ಹೊಂದಿದ ಅಪರೂಪದ ವ್ಯಕ್ತಿ ಅವರು. ಕತೆಯಿರಲಿ, ಕಾದಂಬರಿಯಿರಲಿ, ಕವನವೇ ಇರಲಿ, ಸಾಹಿತ್ಯದ ಯಾವುದೇ ಪ್ರಕಾರವಿರಲಿ ಅವರು ವಿಮರ್ಶೆ ಬರೆಯುವ ಕಲೆಯಲ್ಲಿ ಎತ್ತಿದ ಕೈ ಅನ್ನುವುದಕ್ಕಿಂತ, ಪ್ರೊ. ಶೇಷಗಿರಿರಾವ್ ಸರ್ವರಿಗೂ ಮೇಷ್ಟ್ರು ಮತ್ತು ಮಾರ್ಗದರ್ಶಕರು. ಅವರ ವಿಮರ್ಶೆ ಒಂದು ತಟಸ್ಥ ಶಾಸ್ತ್ರ ಅನ್ನಬಹುದು. ಅಂಟದೆ ಅಂಟಿಕೊಳ್ಳುವ ರೀತಿ ಬರೆಯುವ ಜಾಣ್ಮೆ ಒಪ್ಪುವಂತದ್ದು ಎಂದು ವಾಸುದೇವಮೂರ್ತಿ ಪ್ರತಿಪಾದಿಸಿದರು.

**'ಪ್ರೊ. ಎಲ್.ಎಸ್.ಎಸ್. ಅವರ ಗ್ರೀಕ್ ರಂಗಭೂಮಿ ಮತ್ತು ಇಂಗ್ಲಿಷ್ ಸಾಹಿತ್ಯದ ಚರಿತ್ರೆ'**

ಈ ವಿಷಯವಾಗಿ ಡಾ.ಎಸ್.ಆರ್.ವಿಜಯಶಂಕರ್ ಮಾತನಾಡುತ್ತಾ ಒಂದು ಸಾಹಿತ್ಯ ಬರವಣಿಗೆಯ ಬಗ್ಗೆ ವಿಮರ್ಶೆ ಬರೆಯುವಾಗ ಇರಬೇಕಾದಂತಹ ಜವಾಬ್ದಾರಿಯನ್ನು ಪ್ರೊ. ಶೇಷಗಿರಿರಾವ್ ಸಮರ್ಥವಾಗಿ ನಿಭಾಯಿಸಿದ್ದಾರೆ. ಬೇರೆ ಭಾಷೆಗಳಲ್ಲಿ ಇರುವ ಒಳನೋಟವನ್ನು ಅವರು ಚೆನ್ನಾಗಿ ಅರಿತಿದ್ದರು. ಹೀಗಾಗಿ ಗ್ರೀಕ್ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಬರೆದಿರುವ ಕಥೆ ಕಾದಂಬರಿಗಳನ್ನು ಬೇರೆಯವರು ಮಾಡಿದ ವಿಮರ್ಶೆಗಿಂತ ಎಲ್.ಎಸ್.ಎಸ್. ಅವರು ಬರೆದಿರುವ ವಿಮರ್ಶೆ ವಿಭಿನ್ನವಾಗಿರುತ್ತಿತ್ತು ಮತ್ತು ವಿದ್ವತ್ಪೂರ್ಣವಾಗಿ ತೋರುತ್ತಿತ್ತು. ಪ್ರೊ. ಶೇಷಗಿರಿರಾವ್ ಅವರು ಈ ದಿಶೆಯಲ್ಲಿ ಸಂಪೂರ್ಣ ಪ್ರಭುತ್ವವನ್ನು ಹೊಂದಿದ್ದರು. ಅಷ್ಟೇ ಅಲ್ಲ, ವಿಮರ್ಶೆಗಳನ್ನು ತುಲನಾತ್ಮಕವಾಗಿ ಹೇಗೆ ಮಾಡಬೇಕು ಎಂಬುದನ್ನು ಕಲಿಯಬೇಕಾದರೆ ಇಂದಿನ ಕನ್ನಡ ಸಾಹಿತ್ಯ ವಿದ್ಯಾರ್ಥಿಗಳು ಪ್ರೊ. ಎಲ್.ಎಸ್.ಎಸ್. ಅವರ ವಿಮರ್ಶಾ ಗ್ರಂಥಗಳನ್ನು ಓದಲೇಬೇಕು.

ತತ್ವಶಾಸ್ತ್ರ ಮತ್ತು ಸಾಹಿತ್ಯಿಕ ನೆಲೆಯಲ್ಲಿ ವಿಮರ್ಶೆ ಮಾಡಬೇಕು. ಗ್ರೀಕ್ ಮತ್ತು ಇಂಗ್ಲಿಷ್ ಸಾಹಿತ್ಯಗಳ ರೀತಿಯನ್ನು ಪ್ರಶ್ನಿಸುವ ಕಲೆಗಳಲ್ಲಿ ವ್ಯತ್ಯಾಸವಿದೆ. ಆದ್ದರಿಂದ ಈ ಸಾಹಿತ್ಯದ ಆಳಕ್ಕೆ ಹೋಗದೆ ವಿಮರ್ಶೆ ಮಾಡಲು ಸಾಧ್ಯವಿಲ್ಲ. ಇದನ್ನು ಪ್ರೊ. ಎಲ್.ಎಸ್.ಎಸ್. ಅವರು ಬಲ್ಲವರಾಗಿದ್ದರು ಎಂದರು.

ವೇದಿಕೆಯ ಮೇಲೆ ಉಪಸ್ಥಿತರಿದ್ದ ಪ್ರತಿಷ್ಠಾನದ ಗೌರವಾಧ್ಯಕ್ಷರಾದ ಡಾ. ಪಿ.ವಿ. ನಾರಾಯಣ ಅವರು ಪ್ರಶಸ್ತಿ ಪುರಸ್ಕೃತರನ್ನು ಮತ್ತು ವಿಚಾರ ಮಂಡನೆ ಮಾಡಿದವರನ್ನು ಪ್ರಶಂಸಿದರು.

**ಪ್ರಶಸ್ತಿ ಪ್ರದಾನ ಕಾರ್ಯಕ್ರಮ**

ಪ್ರೊ. ಎಲ್.ಎಸ್. ಶೇಷಗಿರಿರಾವ್ ವಿಮರ್ಶಾ ಪ್ರಶಸ್ತಿ ಜೊತೆಗೆ ಶ್ರೀ ವಿ. ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿಗಳನ್ನು ಡಾ. ಬೈರಮಂಗಲ ರಾಮೇಗೌಡ ಮತ್ತು ಪ್ರೊ. ಎಚ್.ಎಸ್.ರಾಘವೇಂದ್ರರಾವ್ ಅವರು ಪ್ರತಿಷ್ಠಾನದ ಪರವಾಗಿ ಡಾ. ಎಸ್.ಆರ್. ವಿಜಯಶಂಕರ್ ಅವರಿಗೆ ಮತ್ತು ಶ್ರೀ ಬಾಬು ಕೃಷ್ಣಮೂರ್ತಿ ಅವರಿಗೆ ನೀಡಿ ಗೌರವಿಸಿದರು.

ಪ್ರಶಸ್ತಿ ಸ್ವೀಕರಿಸಿದ ವಿಜಯಶಂಕರ್ ಮತ್ತು ಬಾಬು ಕೃಷ್ಣಮೂರ್ತಿ ಅವರು ಪ್ರತಿಷ್ಠಾನಕ್ಕೆ ಧನ್ಯವಾದಗಳನ್ನು, ಕೃತಜ್ಞತೆಯನ್ನು ಸಲ್ಲಿಸಿದರು. ಬಾಬು ಕೃಷ್ಣಮೂರ್ತಿ ಅವರು ಇಂದಿನ ಪ್ರಶಸ್ತಿಗಳ ಹೆಸರನ್ನು ಹೊತ್ತ ಪ್ರೊ. ಎಲ್.ಎಸ್. ಶೇಷಗಿರಿರಾವ್ ಮತ್ತು ಶ್ರೀ ವಿ. ನಾಗರಾಜರಾವ್ ಅವರ ಸಂಬಂಧವನ್ನು ಸಭಿಕರ ಮುಂದೆ ತಿಳಿಸಿದರು.

ಪ್ರಕಟಣೆ

## ಶ್ರೀ ಕೆ. ಮೋಹನ್‌ದೇವ್ ಆಳ್ವ – ಡಾ. ಎಂ.ಕೆ. ಶೈಲಜಾ ಆಳ್ವ ಅವರು ಸ್ಥಾಪಿಸಿರುವ ದತ್ತಿಯಿಂದ

## ಗಮಕ ವಾಚನ ಸ್ಪರ್ಧೆ

ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಶ್ರೀ ಕೆ. ಮೋಹನ್ ದೇವ್ ಆಳ್ವ ಡಾ. ಎಂ.ಕೆ. ಶೈಲಜಾ ಆಳ್ವ ಅವರು ಸ್ಥಾಪಿಸಿರುವ ಅಮೋಘವರ್ಷ ನೃಪತುಂಗ ದತ್ತಿ, ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿ ದತ್ತಿ, ಶ್ರೀ ತಿರುಮಲೆ ತಾತಾಚಾರ್ಯ ಶರ್ಮ ದತ್ತಿ, ಶ್ರೀ ಡಿ.ವಿ. ಗುಂಡಪ್ಪ ದತ್ತಿ ಮತ್ತು ಡಾ. ಎಸ್.ಆರ್. ರಂಗನಾಥ್ ದತ್ತಿಗಳ ಆಶ್ರಯದಲ್ಲಿ ೧೦–೧೬ ವರ್ಷ ವಯಸ್ಸಿನವರಿಗೆ ಗಮಕ ವಾಚನ ಸ್ಪರ್ಧೆಯನ್ನು ಏರ್ಪಡಿಸಿದೆ. ಸ್ಪರ್ಧಿಗಳು ಡಿ.ವಿ.ಜಿ. ಅವರ 'ಅಂತಃಪುರ ಗೀತೆ'ಯ ಯಾವುದಾದರೂ ಒಂದು ಪದ್ಯವನ್ನು ವಾಚಿಸಬೇಕಾಗುತ್ತದೆ.

ಸ್ಪರ್ಧೆಯು ೨೩ ಮಾರ್ಚ್ ೨೦೨೫ ಭಾನುವಾರ ನಡೆಯಲಿದ್ದು, ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಬಯಸುವವರು ಮಾರ್ಚ್ ೧೫ ಶನಿವಾರ ಸಂಜೆ ೫–೦೦ ಗಂಟೆಯ ಒಳಗೆ ಬಿ.ಎಂ.ಶ್ರೀ. ಪ್ರತಿಷ್ಠಾನದ ಕಛೇರಿ, ೩ನೇ ಮುಖ್ಯರಸ್ತೆ, ಬಿ.ಎಂ.ಶ್ರೀ.ಪ್ರತಿಷ್ಠಾನದ ರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು–೫೬೦೦೦೪ ಇಲ್ಲಿ ಹೆಸರನ್ನು ವಯಸ್ಸಿನ ಆಧಾರ ಪತ್ರದೊಂದಿಗೆ ಖುದ್ದಾಗಿ ನೋಂದಾಯಿಸಿಕೊಳ್ಳಬೇಕೆಂದು ಸೂಚಿಸಲಾಗಿದೆ. ವಿಜೇತರಾದವರಿಗೆ ಪ್ರಥಮ ಬಹುಮಾನ ೪,೦೦೦/– ರೂಪಾಯಿ, ದ್ವಿತೀಯ ಬಹುಮಾನ–೩,೦೦೦/–ರೂಪಾಯಿ ಮತ್ತು ತೃತೀಯ ಬಹುಮಾನ– ೨,೦೦೦/–ರೂಪಾಯಿಗಳನ್ನು **ನಗದು ರೂಪದಲ್ಲಿ ಪ್ರಶಸ್ತಿಪತ್ರಗಳೊಂದಿಗೆ ನೀಡಲಾಗುವುದು.** ಶ್ರುತಿಯ ವ್ಯವಸ್ಥೆಯನ್ನು ಸ್ಪರ್ಧಿಗಳು ಸ್ವತಃ ಮಾಡಿಕೊಳ್ಳಬೇಕು.

ಅರ್ಜಿಗಳು ಪ್ರತಿಷ್ಠಾನದ ಕಛೇರಿಯಲ್ಲಿ ದೊರೆಯುತ್ತವೆ.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : ೯೬೨೮೧೨೧೨೬**

**ಡಾ. ಶಾಂತರಾಜು**
ಗೌರವ ಕಾಯದರ್ಶಿ

## ದಿನಾಂಕ ೧೫/೦೨/೨೦೨೫ ಶನಿವಾರ ಬೆಳಗ್ಗೆ ಪಂಡಿತ ಓ.ಆರ್. ರಾಮಣ್ಣ ಮತ್ತು ಶ್ರೀಮತಿ ಪುಟ್ಟಮ್ಮ ದತ್ತಿ ಆಶ್ರಯದಲ್ಲಿ ಗಮಕ ವಾಚನ ಮತ್ತು ವ್ಯಾಖ್ಯಾನ



ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾದ ಡಾ. ಎ.ವಿ. ಪ್ರಸನ್ನ ಅವರು 'ಕುಮಾರವ್ಯಾಸ ಭಾರತ' ಎಂಬ ವಿಷಯದ ಮೇಲೆ ವ್ಯಾಖ್ಯಾನ ನೀಡಿದರು. ಶ್ರೀಮತಿ ನಿರ್ಮಲ ಪ್ರಸನ್ನ ತಮ್ಮ ಸುಶ್ರಾವ್ಯ ಕಂಠದಿಂದ ದೋಷರಹಿತ ವಾಚನ ಮಾಡಿದರು.

**ಕುಮಾರವ್ಯಾಸ ಭಾರತ : ಉದ್ಯೋಗ ಪರ್ವ**

ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂಯೋಜಕ ಶ್ರೀ ಗುರುಪ್ರಸಾದ್ ದತ್ತಿಯ ಬಗ್ಗೆ ಒಂದು ಕಿರುನೋಟವನ್ನು ಚೆಲ್ಲಿದರು. ಸ್ವತಃ ಗಮಕಿಗಳಾಗಿದ್ದ ಪಂಡಿತ ಓ.ಆರ್. ರಾಮಣ್ಣ ಅವರ ಹೆಸರಿನಲ್ಲಿ ಅವರ ಪುತ್ರ ಡಾ. ಆರ್. ಲಕ್ಷ್ಮೀನಾರಾಯಣ ಅವರು ಈ ದತ್ತಿಯನ್ನು ಇಟ್ಟಿದ್ದಾರೆ, ಇದು ಒಂಬತ್ತನೇ ಕಾರ್ಯಕ್ರಮ ಎಂದು ತಿಳಿಸಿದರು.

ಶ್ರೀ ಮಾರುತಿ ರಾಮ್ ಅವರು ಹಾಡಿದ 'ವಂದಿಪೆ ನಿನಗೆ ಗಣನಾಥ' ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು.

ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಎಲ್ಲರಿಗೂ ಸ್ವಾಗತ ಕೋರಿ ಗಮಕ ಕಲಾವಿದರುಗಳ ಪರಿಚಯ ಮಾಡಿದರು.

ದಿವಂಗತ ಓ. ರಾಮಣ್ಣ ಅವರ ಭಾವಚಿತ್ರಕ್ಕೆ ಪುಷ್ಪನಮನ ನಡೆಯಿತು.

ದತ್ತಿ ದಾನಿಗಳಾದ ಡಾ. ಆರ್. ಲಕ್ಷ್ಮೀನಾರಾಯಣ ಅವರು ಆಶುಭಾಷಣ ಮಾಡಿ ತಮ್ಮ ತಂದೆ ತಾಯಿಯವರ ಹೆಸರಿನಲ್ಲಿ ಈ ದತ್ತಿ ಇಡಲು ತಮಗಾದ ಪ್ರೇರಣೆಯನ್ನು ಭಾವುಕರಾಗಿ ನುಡಿದರು.

'ಕುಮಾರವ್ಯಾಸ ಭಾರತ: ಉದ್ಯೋಗ ಪರ್ವ'ದ ಆರು ಮತ್ತು ಏಳನೇ ಅಧ್ಯಾಯಕ್ಕೆ ಸಂಬಂಧಿಸಿದಂತೆ ವಾಚನ ವ್ಯಾಖ್ಯಾನದ ಪ್ರಾರಂಭದ ನುಡಿಗಳನ್ನು ಡಾ. ಎ.ವಿ. ಪ್ರಸನ್ನ ಅವರು ಹೇಳಿ ಪೀಠಿಕೆ ನೀಡಿದರು. ಯುದ್ಧದ ಪ್ರಾರಂಭಕ್ಕೆ ಒಂದುಕಡೆ ಸಿದ್ಧತೆಯನ್ನು ಮಾಡಿಕೊಳ್ಳುತ್ತಾ ಮತ್ತೊಂದು ಕಡೆ ಉಭಯ ಪಕ್ಷಗಳ ನಡುವೆ ಸಂಧಿಯನ್ನೂ ಮಾಡಿಕೊಳ್ಳುವ ವಿಚಾರವನ್ನು ರಾಜಕೀಯ ಮುತ್ಸದ್ದಿತನದ ಜಾಣ್ಮೆಯ ಪ್ರಸಂಗ ಇದು ಎಂದು ಹೇಳಿದರು. ಯುದ್ಧದಿಂದ ನಷ್ಟವೇ ಹೆಚ್ಚು, ಆದರಿಂದ ಯುದ್ಧ ಬೇಡ ಅನ್ನುವಾಗ, ಚತುರನಾದ ಕೃಷ್ಣನಿಗೆ ಯುದ್ಧ ಆಗಲೇಬೇಕಿತ್ತು. ಆಗ ಕೃಷ್ಣ ಪಾಂಡವರನ್ನು ಆಪ್ತಾಲೋಚನೆಗೆ ತನ್ನ ಶಿಬಿರಕ್ಕೆ ಕರೆಸುತ್ತಾನೆ.

'ಕೇಳು ಧನಮೇಜಯ ಧರಿತ್ರೀಪಾಲ...' ನುಡಿಗಳೊಂದಿಗೆ ಇದು ಪ್ರಾರಂಭವಾಗುತ್ತದೆ.

'ಸಂಧಾನವೋ, ಸಂಗ್ರಾಮವೋ. ನಿನ್ನ ಅಭಿಮತವು' ಹೀಗೆ ಮುಂದುವರೆಯುತ್ತಾ ಚತುರನಾದ ಕೃಷ್ಣ ಧರ್ಮರಾಯನ ಇಂಗಿತವನ್ನು ಗ್ರಹಿಸಿ, ತನ್ನ ಧ್ಯೇಯ ಸಾಧನೆಗಾಗಿ ಅರ್ಜುನನನ್ನೂ, ಭೀಮನನ್ನೂ ಪ್ರೇರೇಪಿಸುತ್ತಾ ಅವರನ್ನು ರೋಷಾವೇಶದ ಅಂಕುಶದಲ್ಲಿ ಸಿಕ್ಕಿಸುವ ಸನ್ನಿವೇಶವನ್ನು ಕುಮಾರವ್ಯಾಸನ ನುಡಿಗಳ ವಚನದ ನಂತರ ವ್ಯಾಖ್ಯಾನಿಸಿ, ದುರ್ಯೋಧನನ ಬಳಿ ಸಂಧಾನಕ್ಕೆ ಹೋಗುವ ನಾಟಕವನ್ನು ಗಮಕಿಗಳು ಕಣ್ಣಿಗೆ ಕಟ್ಟುವಂತೆ ವರ್ಣಿಸಿದರು. ದ್ರೌಪದಿಯೂ ಕೃಷ್ಣನ ಬಳಿಬಂದು ಅವನ ಕಾಲುಗಳನ್ನು ಹಿಡಿದು ತನಗಾದ ಅವಮಾನಕ್ಕೆ ಪ್ರತೀಕಾರ ಬೇಕು, ಅದು ನಿನ್ನಿಂದಲೇ ಆಗಬೇಕು ಅನ್ನುತ್ತಾ ಆಣೆಗಳ ಮೇಲೆ ಆಣೆ ಇಡುತ್ತಾ ಕೊನೆಗೆ ತನ್ನ ತಂದೆ ತಾಯಿಗಳ ಮೇಲೂ ಆಣೆ ಇಡುವ ಪ್ರಸಂಗ ಮನ ಕರಗಿಸುವಂತೆ ಇತ್ತು.

'ಕನ್ಯಾದಾನದ ಫಲ. ಭಾರತದೊಳು ಒಂದಕ್ಷರ..' ಹೀಗೆ ವಾಚಿಸಿ ವ್ಯಾಖ್ಯಾನ ಮಾಡುವುದರೊಂದಿಗೆ ಗಮಕ ಮುಕ್ತಾಯವಾಯಿತು.

ನಂತರ ಅಧ್ಯಕ್ಷತೆ ವಹಿಸಿದ್ದ ಚಂದ್ರಶೇಖರ ನಾದೂರು ಅವರು ಕುವೆಂಪು ಅವರ 'ಕುಮಾರವ್ಯಾಸನು ಹಾಡಿದನೆಂದರೆ ಕಲಿಯುಗ ದ್ವಾಪರವಾಗುವುದು' ಅನ್ನುವುದನ್ನು ಇಂದು ನಾವು 'ಕುಮಾರವ್ಯಾಸನ ಇಂತಹವರು ಹಾಡಿದರೆಂದರೆ ಭಾರತ....... ಮಿಂಚಿನ ಹೊಳೆ ಹರಿದಾಡುವುದು' ಎಂದು ಬದಲಾಯಿಸಿದರೆ ಅನ್ನುವಂತೆ ಮಾಡಿದೆ ಇಂದಿನ ವಾಚನ ಮತ್ತು ವ್ಯಾಖ್ಯಾನ ಎಂದು ಗುಣಗಾನ ಮಾಡಿದರು. ಭಾಮಿನಿ ಷಟ್ಪದಿ ಕವಿಗಳನ್ನು ಹಿಡಿದಿಡುವಂತಹ ಶಕ್ತಿಯನ್ನು ಹೊಂದಿದೆ ಎಂಬುದನ್ನು ಈ ಪ್ರಸಂಗದ ವಾಚನ ಮತ್ತು ವ್ಯಾಖ್ಯಾನ ನಿರೂಪಿಸಿದೆ. ಕುಮಾರವ್ಯಾಸ ಕೃಷ್ಣನನ್ನು ತನ್ನ ಕಾವ್ಯದ ಕೇಂದ್ರಬಿಂದುವನ್ನಾಗಿ ಮಾಡಿಕೊಂಡಿರುವುದು ಇಲ್ಲಿ ಎದ್ದು ಕಾಣುತ್ತದೆ ಎಂದರು. ಈ ಪ್ರಸಂಗದಲ್ಲಿ ಗಮಕಿಗಳು, ಕುಮಾರವ್ಯಾಸ ಇಬ್ಬರೂ ದ್ರೌಪದಿಯ ದಿಟ್ಟತನವನ್ನು ಎತ್ತಿ ತೋರಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂದರು.

ಎಲ್ಲರನ್ನೂ ರೋಮಾಂಚನಗೊಳಿಸಿದ ಗಮಕ ಕಾರ್ಯಕ್ರಮ ಕಿರು ಕಾಣಿಕೆ ಸಲ್ಲಿಕೆ ಮತ್ತು ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.



## ದಿನಾಂಕ ೧೬/೦೨/೨೦೨೫ ಭಾನುವಾರ ಬೆಳಗ್ಗೆ 'ಸಂಗೀತ ಸರಸ್ವತಿ ವಿದ್ವಾನ್ ಪಿಟೀಲು ಚೌಡಯ್ಯ ದತ್ತಿ' ಅಡಿಯಲ್ಲಿ ಪಿಟೀಲು ವಾದನ ಮತ್ತು ಭಕ್ತಿಗೀತೆಗಳ ಗಾಯನ ಸ್ಪರ್ಧೆ ನಡೆಯಿತು.

ಹಸ್ತಪ್ರತಿ ವಿಭಾಗದ ಸಂಯೋಜಕ ಶ್ರೀ ಗುರುಪ್ರಸಾದ್ ದತ್ತಿಯ ಬಗ್ಗೆ ಮಾತನಾಡುತ್ತಾ ಶ್ರೀ ಮೋಹನ್ ದೇವ್ ಆಳ್ವ ಅವರು ತಮ್ಮ ಪತ್ನಿ ಡಾ. ಎಂ.ಕೆ. ಶೈಲಜಾ ಆಳ್ವ ಅವರೊಡಗೂಡಿ ಹಲವು ದತ್ತಿಗಳನ್ನು ಪ್ರತಿಷ್ಠಾನದಲ್ಲಿ ಸ್ಥಾಪಿಸಿದ್ದಾರೆ. ಅದರಲ್ಲೂ ನಮ್ಮ ದೇಶದ ಹೆಸರಾಂತ ಕಲಾವಿದರ ಸೇವೆಯನ್ನು ಗುರುತಿಸಿ ಅವರುಗಳ ಹೆಸರು ಚಿರಸ್ಥಾಯಿ ಆಗಿರಬೇಕೆಂಬ ಉದಾತ್ತ ಧ್ಯೇಯದಿಂದ ದತ್ತಿಗಳನ್ನು ಸ್ಥಾಪಿಸಿರುವುದು ಶ್ಲಾಘನೀಯ. ಬೆಂಗಳೂರಿನ ಮಕ್ಕಳ ಕೂಟದ ಅಧ್ಯಕ್ಷರೂ ಗಾಯನ ಸಮಾಜದ ಧರ್ಮದರ್ಶಿಗಳೂ ಆಗಿರುವ ಆಳ್ವ ಅವರಿಗೆ ಮಕ್ಕಳು, ಯುವ ಪ್ರತಿಭೆಗಳು ಎಂದರೆ ಪಂಚಪ್ರಾಣ. ಅದಕ್ಕೆ ಇಂದು ನಡೆಯುವ ಈ ಪಿಟೀಲು ವಾದನ ಮತ್ತು ಶಾಸ್ತ್ರೀಯ ಗಾಯನ ಸ್ಪರ್ಧೆಯೇ ಸಾಕ್ಷಿ ಎಂದರು.

ಮುಖ್ಯ ಅತಿಥಿಗಳಾದ ಶ್ರೀ ಮೋಹನ್‌ದೇವ್ ಆಳ್ವ, ತೀರ್ಪುಗಾರರು, ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡ ಮತ್ತು ಸ್ಪರ್ಧಿಗಳ ಸಮೇತರಾಗಿ ಅವರ ಗುರುಗಳು, ಪಾಲಕರನ್ನು ಸ್ವಾಗತಿಸಿ ಯುವ ಪೀಳಿಗೆಗೆ ಉತ್ತೇಜನ ನೀಡುವ ಮತ್ತು ವೇದಿಕೆ ಕಲ್ಪಿಸುವ ಈ ಅವಕಾಶವನ್ನು ಸ್ಪರ್ಧಿಗಳು ಪಡೆಯಲಿ ಎಂದರು.

ವೇದಿಕೆಯನ್ನು ಅಲಂಕರಿಸಿದ್ದ ಗಣ್ಯರು ಜ್ಯೋತಿ ಬೆಳಗಿದರು.

ಶ್ರೀ ಮೋಹನ್ ದೇವ್ ಆಳ್ವ ಅವರು ಸ್ಪರ್ಧಿಗಳಿಗೆ ಕೆಲವು ಉಪಯುಕ್ತ ಹಿತವಚನಗಳನ್ನು ನೀಡಿದರು.

ಪಿಟೀಲು ವಾದನ ಮತ್ತು ಭಕ್ತಿಗೀತೆಗಳ ಗಾಯನ ಸ್ಪರ್ಧೆಗಳ ನಿಯಮಗಳನ್ನು ತೀರ್ಪುಗಾರರು ತಿಳಿಸಿದ ನಂತರ ಸ್ಪರ್ಧೆಗಳು ಪ್ರಾರಂಭವಾದುವು. ಈ ಸ್ಪರ್ಧೆ ೧೦–೧೬ ವಯಸ್ಸಿನವರಿಗೆ ಸೀಮಿತವಾಗಿತ್ತು.

ಪಿಟೀಲು ಸ್ಪರ್ಧೆಯಲ್ಲಿ ೭ ಜನ ಭಾಗವಹಿಸಿದ್ದರು. ತೀರ್ಪುಗಾರರಾಗಿ ವಿದುಷಿ ಶ್ರೀಮತಿ ಸೌಮ್ಯ ರಾಮಚಂದ್ರ ಮತ್ತು ಶ್ರೀ ನಾಗರಾಜ್ ಮಂಡ್ಯ ಅವರುಗಳು ಕಾರ್ಯ ನಿರ್ವಹಿಸಿದರು.

ಭಕ್ತಿಗೀತೆಗಳ ಗಾಯನದಲ್ಲಿ ೪೪ ಜನ ಭಾಗವಹಿಸಿದ್ದರು. ತೀರ್ಪುಗಾರರಾಗಿ ಶ್ರೀಮತಿ ಪದ್ಮಿನಿ ಓಕ್ ಮತ್ತು ಡಾ.ರಮ್ಯಾ ಸೂರಜ್ ಅವರುಗಳು ಕಾರ್ಯ ನಿರ್ವಹಿಸಿದರು.

ಭೋಜನದ ನಂತರ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.

**ವಿಜೇತರು**

**ಪಿಟೀಲು ವಾದನ**

ಪ್ರಥಮ ಬಹುಮಾನ ಅಭಿನವ್ ಕೆ. ೪,೦೦೦/– ರೂಪಾಯಿಗಳು

ದ್ವಿತೀಯ ಬಹುಮಾನ ಶ್ರೀಲಲಿತಾ, ಮೈಸೂರು ೩,೦೦೦/–ರೂಪಾಯಿಗಳು

ತೃತೀಯ ಬಹುಮಾನ ಹರ್ಷಿತ್ ಪ್ರದೀಪ್ ೨,೦೦೦/–ರೂಪಾಯಿಗಳು

ತೃತೀಯ ಬಹುಮಾನ ಅಕ್ಷಯ ಭಟ್ ಡಿ. ೧,೦೦೦/– ರೂಪಾಯಿಗಳು

**ಶಾಸ್ತ್ರೀಯ ಭಕ್ತಿ ಗೀತೆಗಳ ಗಾಯನ**

ಪ್ರಥಮ ಬಹುಮಾನ ಭುವನ ಎ. ೩,೦೦೦/– ರೂಪಾಯಿಗಳು

ದ್ವಿತೀಯ ಬಹುಮಾನ ಅಭಿನವ್ ಕೆ. ೨,೦೦೦/– ರೂಪಾಯಿಗಳು

ತೃತೀಯ ಬಹುಮಾನ ಧಾತ್ರಿ ಸಿಂಚನ ೧,೦೦೦/– ರೂಪಾಯಿಗಳು

ತೃತೀಯ ಬಹುಮಾನ ಹರ್ಷಿತಾ ಪ್ರದೀಪ್ ೧,೦೦೦/– ರೂಪಾಯಿಗಳು

ಪ್ರತಿಷ್ಠಾನದ ಕಛೇರಿ ಸಿಬ್ಬಂದಿಗಳಾದ ಶ್ರೀಮತಿ ಪದ್ಮಾಬಾಯಿ ಮತ್ತು ಶ್ರೀಮತಿ ಗಾಯತ್ರಿ ಅವರು ಅಚ್ಚುಕಟ್ಟಾಗಿ ಸ್ಪರ್ಧೆಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ಮಾಡಿದ್ದು ಎದ್ದು ಕಾಣುತ್ತಿತ್ತು.

ಅಧ್ಯಕ್ಷೀಯ ನುಡಿಗಳ ನಂತರ ವಂದನಾರ್ಪಣೆಯೊಂದಿಗೆ ಸ್ಪರ್ಧಾ ಕಾರ್ಯಕ್ರಮ ಮುಕ್ತಾಯವಾಯಿತು.



## ದಿನಾಂಕ ೨೨/೦೨/೨೦೨೫ ಶನಿವಾರ ಸಂಜೆ 'ಎಲ್. ನಾಗಮಣಿ ಲಕ್ಷ್ಮೀನಾರಾಯಣ ದತ್ತಿ(ಸಂಗೀತ)' ಅಡಿಯಲ್ಲಿ ಕುಮಾರಿ ಚಂದನಾ ಎಂ. ಮತ್ತು ಸಹಕಲಾವಿದರು ಸುಗಮ ಸಂಗೀತ ಕಾರ್ಯಕ್ರಮ ನಡೆಸಿಕೊಟ್ಟರು.

ಈ ದತ್ತಿಯನ್ನು ಇತ್ತೀಚೆಗೆ ನಿಧನರಾದ ತಮ್ಮ ಧರ್ಮಪತ್ನಿ ಎಲ್. ನಾಗಮಣಿ ಲಕ್ಷ್ಮೀನಾರಾಯಣ ಅವರ ಹೆಸರಿನಲ್ಲಿ ಪ್ರತಿಷ್ಠಾನದ ನಿಕಟಪೂರ್ವ ಅಧ್ಯಕ್ಷರಾದ ಡಾ. ಆರ್. ಲಕ್ಷ್ಮೀನಾರಾಯಣ ಅವರು ಸ್ಥಾಪಿಸಿದ್ದಾರೆ. ಇದು ಎರಡನೇ ಕಾರ್ಯಕ್ರಮ ಎಂದು ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂಯೋಜಕ ಬಿ.ಎಸ್. ಗುರುಪ್ರಸಾದ್ ಅವರು ತಿಳಿಸಿದರು. ಶ್ರೀಮತಿ ಎಲ್. ನಾಗಮಣಿ ಲಕ್ಷ್ಮೀನಾರಾಯಣ ಅವರ ಭಾವಚಿತ್ರಕ್ಕೆ ಅವರ ಕುಟುಂಬದ ಸದಸ್ಯರೆಲ್ಲಾ ಪುಷ್ಪಾರ್ಚನೆ ಮಾಡಿ ನಮನ ಸಲ್ಲಿಸಿದರು. ಕಲಾವಿದರೂ ಕೈಜೋಡಿಸಿದರು. ಕಲಾವಿದರ ಕಿರುಪರಿಚಯ ಮಾಡಲಾಯಿತು.

ಹಾಡುಗಾರ್ತಿ ಚಂದನಾ ಮುರಳೀಧರ, ಇವರು ಉಸ್ತಾದ್ ಫೈಜ್ ಖಾನ್ ಮತ್ತು ಅತ್ರೆ ಇವರ ವಿದ್ಯಾರ್ಥಿ. ಕಿರುವಯಸ್ಸಿನಲ್ಲೇ ಹೆಸರು ಗಳಿಸಿ, ಕೇವಲ ೧೩ ವರ್ಷದವರಿದ್ದಾಗ ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿ 'ಅಕ್ಕ' ಸಂಸ್ಥೆಯ ಆಹ್ವಾನದ ಮೇಲೆ ಸ್ಯಾನ್ ಹೋಸೆ ಊರಿನಲ್ಲಿ ಸಂಗೀತ ಕಾರ್ಯಕ್ರಮ ನೀಡಿದ ಪ್ರತಿಭೆ. ಆಕಾಶವಾಣಿಯ 'ಬಿ' ದರ್ಜೆಯ ಕಲಾವಿದೆ. ಈಗಾಗಲೇ ಹಲವಾರು ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ. ಸುಗಮ ಸಂಗೀತದಲ್ಲಿ ಇವರ ಒಲವು. ವಿಶೇಷತೆಯೆಂದರೆ ಚಂದನಾ ಅವರು ನೂರಕ್ಕಿಂತಾ ಅಧಿಕ 'ಏಕವ್ಯಕ್ತಿ' ಕಾರ್ಯಕ್ರಮಗಳನ್ನು ನೀಡಿ ಜನರನ್ನು ಮೆಚ್ಚಿಸಿರುವುದು.

ಚಂದನಾ ಅವರಿಗೆ ಪಕ್ಕವಾದ್ಯದಲ್ಲಿ ಹಾರ್ಮೋನಿಯಂ ಮೇಲೆ ವಿಶ್ವಜಿತ ಕಿಣಿಯವರು, ತಬಲಾ ಸಾಥಿಯಾಗಿ ಸುಮೀತ ನಾಯಕ್ ಅವರು ಸಹಕಲಾವಿದರಾಗಿದ್ದಾರೆ ಎಂದು ಗುರುಪ್ರಸಾದ್ ತಿಳಿಸಿದರು. ಹಾಗೆ ಎಲ್ಲಾ ಸಭಿಕರನ್ನೂ ಸ್ವಾಗತಿಸಿದರು.

ಶ್ರೀಮತಿ ಚಂದನಾ ಅವರು ಗಣಪನ ಸ್ತುತಿಯೊಂದಿಗೆ ತಮ್ಮ ಗಾಯನವನ್ನು ಪ್ರಾರಂಭಿಸಿದರು. ಅಂತರಾತ್ಮ, ನಾರಾಯಣ ಶ್ರೀ ಹರಿಗೋವಿಂದ ದಾರಿಯ ತೋರೋ ಮುಕುಂದ, ಕಲಿಯುಗದಲಿ ಹರಿನಾಮವ ನೆನೆದರೆ ಕುಲಕೋಟಿಗಳು, ಬಾಗಿಲನು ತೆಗೆದು ಸೇವೆಯನು ಕೊಡು ಹರಿಯೆ, ಆನಂದಮಯ, ಯದುಕುಲನಂದನ ಮಾಧವ ಮಧುಸೂಧನ ಮುಂತಾದ ಭಕ್ತಿಗೀತೆಗಳನ್ನು ಹಿಂದೂಸ್ತಾನಿ ಸಂಗೀತ ಶೈಲಿಯಲ್ಲಿ ಹಾಡಿದರು. ಇವರ ಗಾಯನ ಕಿವಿಗಳಿಗೆ ಇಂಪಾಗಿಯೂ, ಮನಸ್ಸಿಗೆ ತಂಪಾಗಿಯೂ ಇತ್ತು. ಸಭಿಕರನ್ನು ಭಕ್ತಿಪರವಶರನ್ನಾಗಿಯೂ ಮಾಡಿಸಿತು. ತಬಲಾ ವಾದನ ಮತ್ತು ಹಾರ್ಮೋನಿಯಂ ನುಡಿಸಿದ್ದು ಹಾಡುಗಾರ್ತಿಯ ತಾಳಕ್ಕೆ ಸರಿಸಾಟಿಯಾಗಿತ್ತು. ಸಭಿಕರೆಲ್ಲಾ ಚಂದನಾ, ವಿಶ್ವಜಿತ ಮತ್ತು ಸುಮೀತ್ ಅವರನ್ನು ಅಭಿನಂದಿಸಿದರು.

## ದಿನಾಂಕ ೨೦/೦೨/೨೦೨೫ ಗುರುವಾರ ಸಂಜೆ ಆ.ನೇ. ಉಪಾಧ್ಯೆ, ಡಿ.ಎಲ್.ಎನ್., ಎಮ್.ಜಿ. ನಂಜುಂಡಾರಾಧ್ಯ ಮತ್ತು ಸೋಸಲೆ ಅಯ್ಯಾಶಾಸ್ತ್ರಿ ಸಂಯುಕ್ತ ದತ್ತಿ ಆಶ್ರಯದಲ್ಲಿ ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜ್‌ನ ಸಹ ಪ್ರಾಧ್ಯಾಪಕ ಮತ್ತು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಸತ್ಯಮಂಗಲ ಮಹಾದೇವ ಅವರು 'ಡಿ.ಎಲ್.ಎನ್. ಅವರ ಸಂಶೋಧನಾ ಲೇಖನಗಳು' ವಿಷಯ ಕುರಿತು ಉಪನ್ಯಾಸ ನೀಡಿದರು.



ಇಂದಿನ ಉಪನ್ಯಾಸ ಕಾರ್ಯಕ್ರಮದ ನಿರೂಪಣೆ ಜವಾಬ್ದಾರಿಯನ್ನು ನಮ್ಮ ಪ್ರತಿಷ್ಠಾನದ ಸಂಶೋಧನಾ ವಿಭಾಗದ ವಿದ್ಯಾರ್ಥಿ ಭರಮಣ್ಣ ಅವರು ವಹಿಸಿದ್ದರು. ಉಪನ್ಯಾಸಕರಾದ ಡಾ. ಸತ್ಯಮಂಗಲ ಮಹಾದೇವ ಮತ್ತು ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡ ಅವರನ್ನು ವೇದಿಕೆಗೆ ಆತ್ಮೀಯವಾಗಿ ಆಹ್ವಾನಿಸಿದರು.

ಪ್ರತಿಷ್ಠಾನದ ಹಸ್ತಪತಿ ವಿಭಾಗದ ಸಂಯೋಜಕ ಶ್ರೀ ಬಿ.ಎಸ್. ಗುರುಪ್ರಸಾದ್, ಇಂದು ಸಂಯುಕ್ತ ದತ್ತಿ ಕಾರ್ಯಕ್ರಮವಾದ್ದರಿಂದ ವಿಧ್ಯುಕ್ತವಾಗಿ ಆ.ನೇ. ಉಪಾಧ್ಯೆ, ಡಿ.ಎಲ್.ಎನ್., ಎಂ.ಜಿ. ನಂಜುಂಡಾರಾಧ್ಯ ಮತ್ತು ಸೋಸಲೆ ಅಯ್ಯಾ ಶಾಸ್ತ್ರಿ ಇವರುಗಳ ಹೆಸರಿನಲ್ಲಿ ಪ್ರಾರಂಭವಾದ ದತ್ತಿಯ ಮೂಲ ಚೂಲಗಳನ್ನು ಸಭೆಗೆ ಪರಿಚಯಿಸಿದರು. ಜೊತೆಗೆ ಇದು ಸುಮಾರು ೧೯೭೫ರಲ್ಲಿ ಪ್ರಾರಂಭವಾಗಿ ಇಂದೂ ಅವಿರತವಾಗಿ ನಡೆದುಕೊಂಡು ಬರುತ್ತಿದೆ. ಆಗ ದತ್ತಿಗೆ ನೀಡಿದ ಮೊತ್ತ ಬಹಳ ಕಡಿಮೆ ಇದ್ದಿದ್ದರಿಂದ ಎಲ್ಲವನ್ನೂ ಕೂಡಿಸಿ ಮಾಡುತ್ತಿದ್ದೇವೆ. ಆದರೆ ಆಗ ಅನೇಕರು ಜೋಡಿಸಿ ಕೊಟ್ಟ ಹಣಕ್ಕೆ ಬೆಲೆ ಕಟ್ಟಲಾಗದು ಎಂದರು. ಮೂವರೂ ದತ್ತಿ ನಾಮಾಂಕಿತರು ಶ್ರೇಷ್ಠ ಮಟ್ಟದ ವಿದ್ವಾಂಸರುಗಳು, ಅವರುಗಳನ್ನು ಈಗಲೂ ನೆನೆಸಿಕೊಳ್ಳುವಲ್ಲಿ ಇಂತಹ ದತ್ತಿ ಉಪನ್ಯಾಸಗಳು ಉಪಯುಕ್ತ ಎಂದರು.

ಭರಮಣ್ಣ ಅವರು ಉಪನ್ಯಾಸಕ, ಶೇಷಾದ್ರಿಪುರಂ ಸಂಜೆ ಪದವಿ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಸತ್ಯಮಂಗಲ ಮಹಾದೇವ ಅವರ ಪರಿಚಯ ಮಾಡಿಸಿ ಕೊಟ್ಟರು.

ಮಹಾದೇವ ಉಪನ್ಯಾಸ ಪ್ರಾರಂಭಿಸುತ್ತಾ ಡಿ.ಎಲ್.ಎನ್. ಅವರು ಯಾವುದೇ ಕೆಲಸವನ್ನು ಹಮ್ಮಿಕೊಂಡರೆ ಅದನ್ನು ಅಚ್ಚುಕಟ್ಟಾಗಿ ಮತ್ತು ಕೇಂದ್ರೀಕೃತ ಮನಸ್ಸಿನಿಂದ ಮಾಡುತ್ತಿದ್ದವರು. ಗ್ರಂಥಗಳನ್ನು ಓದಿದಾಗ ಮುಖ್ಯ ಅಂಶಗಳನ್ನು ಗ್ರಹಿಸಿ ಟಿಪ್ಪಣಿ ಮಾಡಿಕೊಳ್ಳುವ ಒಳ್ಳೆಯ ಅಭ್ಯಾಸವನ್ನು ಅವರು

ರೂಢಿ ಮಾಡಿಕೊಂಡಿದ್ದರು. ಅದು ಇಂದು ನಮಗೆಲ್ಲಾ ಉಪಯುಕ್ತವಾಗುತ್ತಿದೆ. ಅದರಲ್ಲೂ ಅವರ ಟಿಪ್ಪಣಿಗಳು ಪಠ್ಯಪುಸ್ತಕಗಳಾಗಿ ಹಸ್ತಪ್ರತಿ ಅಧ್ಯಯನ ಮಾಡುವವರಿಗೆ ದಾರಿದೀಪವಾಗಿವೆ. ಡಿ.ಎಲ್.ಎನ್. ಅವರು ಚಿಕ್ಕ ವಯಸ್ಸಿನಿಂದಲೇ ಬರವಣಿಗೆ ಪ್ರಾರಂಭಿಸಿದವರು. ಬಿ.ಎಂ.ಶ್ರೀ. ಅವರ ಶಿಷ್ಯರಾಗಿದ್ದರು. ಅವರ ಸಾಹಿತ್ಯ ಸೇವೆ, ಅಧ್ಯಯನ ಮುಂದುವರೆದು ಅವರು 'ಶಬ್ದಮಣಿ ದರ್ಪಣಂ' ಕೃತಿಯನ್ನು ಸಂಪಾದಿಸಿದರು. ಈ ಕೃತಿಯಲ್ಲಿನ ಕೆಲವು ದೋಷಗಳನ್ನು ಎತ್ತಿ ತೋರಿಸಿ ಡಾ. ಎಂ.ಎಂ. ಕಲಬುರ್ಗಿಯವರು ಬರೆದಾಗ, ಕಲಬುರ್ಗಿಯವರಿಗೆ ತಮ್ಮ ತಪ್ಪಿನ ಅರಿವಾಗಿ, ಸ್ವತಃ ಮೈಸೂರಿಗೆ ಹೋಗಿ ಡಿ.ಎಲ್.ಎನ್. ಅವರನ್ನು ಭೇಟಿಯಾಗಿ ನಾನು ನಿಮ್ಮ ಕೃತಿಯಲ್ಲಿನ ದೋಷವನ್ನು ಗುರುತಿಸಿದ್ದೇನೆ. ಆದರೆ ನೀವು ದೋಷರಹಿತರು ಎಂದರಂತೆ. ಆಗ ಡಿ.ಎಲ್.ಎನ್. ಕಲಬುರ್ಗಿಯವರ ಹೆಗಲಮೇಲೆ ಕೈ ಹಾಕಿ, 'ಪರವಾಗಿಲ್ಲ, ನನಗೆ ಇಂದು ಖುಷಿಯಾಗಿದೆ. ಒಬ್ಬರಾದರೂ ನನ್ನ ಕೃತಿಯನ್ನು ಗಂಭೀರವಾಗಿ ಓದಿ ದೋಷಗಳ ಬಗ್ಗೆ ವ್ಯಾಖ್ಯಾನ ಮಾಡಿದ್ದಾರೆ. ಆ ವ್ಯಕ್ತಿ ನೀವೇ ಎಂದು ತಿಳಿದು ಬಹಳ ಹೆಮ್ಮೆಯಾಗಿದೆ' ಎಂದು ಕಲಬುರ್ಗಿಯವರಿಗೆ ಮನೆಯಲ್ಲೇ ಭೋಜನದ ಆತಿಥ್ಯ ನೀಡಿ ಬೀಳ್ಕೊಟ್ಟರಂತೆ. ಕಲಬುರ್ಗಿಯವರಿಗೆ ಹೇಗನಿಸಿರಬೇಕು ಅಲ್ಲವೇ?

ಈ ಘಟನೆ ಮುಂದಿನ ಸಂಶೋಧಕರಿಗೆ ಒಂದು ಕಿವಿಮಾತು ಇದ್ದಂತೆ. ನಾವು ಮಾಡಿದ ಕಾರ್ಯವೇ ಶ್ರೇಷ್ಠ, ಅದು ದೋಷರಹಿತ ಅಂದುಕೊಳ್ಳಬಾರದು. ಇನ್ನೊಬ್ಬರು ತಪ್ಪುಗಳನ್ನು ಹುಡುಕಿ ಹೇಳಿದಾಗ, ಅದನ್ನು ಒಪ್ಪಿಕೊಳ್ಳುವ ದೊಡ್ಡಮನಸ್ಸು ಇರಬೇಕು. ಡಿ.ಎಲ್.ಎನ್. ಅವರು ಸರ್ವಜ್ಞನ ಕೃತಿಗಳ ಮೇಲೂ ಆಳವಾದ ಸಂಶೋಧನೆಯನ್ನು ಮಾಡಿದ್ದಾರೆ. ಕಾಕತಾಳೀಯ ಅನ್ನುವಂತೆ ಇಂದು 'ಸರ್ವಜ್ಞನ ದಿನ' ಎಂದರು. ಅವರ ಲೇಖನಗಳು ಕೇವಲ ಸಾಹಿತ್ಯ ಪುಟಗಳಲ್ಲ, ಅವು ಡಿ.ಎಲ್.ಎನ್. ಉಳಿ ಹಿಡಿದು ಕೆತ್ತಿದ ಕಲಾಕೃತಿಗಳು ಎಂದು ಅನೇಕರು ಬಣ್ಣಿಸಿದ್ದಾರೆ. ಅವರ ಸಮಗ್ರ ಸಂಶೋಧನಾ ಲೇಖನಗಳಾಗಲಿ, ಇನ್ನಾವುದೇ ಗ್ರಂಥಗಳಾಗಲಿ ಉತ್ಕೃಷ್ಟ ಗುಣಮಟ್ಟದವು ಎನ್ನುತ್ತಾ ಡಿ.ಎಲ್.ಎನ್. ಅವರು ಬರೆದ ಹಲವು ಗ್ರಂಥಗಳನ್ನು ಉಲ್ಲೇಖಿಸಿ ತಮ್ಮ ಉಪನ್ಯಾಸವನ್ನು ಮುಗಿಸಿದರು.

**'ಯುಗ ಯುಗಗಳ ಪರ್ಯಂತ ಉಳಿಯುವಂತಿರಬೇಕು ಸಂಶೋಧನೆಯ ಕ್ಷಮತೆ'**

ಸಂಶೋಧನೆಯಲ್ಲಿ ಉತ್ಕೃಷ್ಟತೆ ಹೇಗೆ ತುಂಬಿರಬೇಕು ಎಂಬುದನ್ನು ಅರ್ಥಮಾಡಿಕೊಳ್ಳಬೇಕಾದರೆ ಡಿ.ಎಲ್.ಎನ್. ಅವರ ಸಮಗ್ರ ಸಂಶೋಧನಾ ನಿಧಿಯನ್ನು ಓದಲೇಬೇಕು ಎಂದು ಡಾ. ಬೈರಮಂಗಲ ರಾಮೇಗೌಡ, ಇಂದಿನ ಸಂಶೋಧನಾರ್ಥಿಗಳಿಗೆ ಕಿವಿಮಾತು ಹೇಳಿದರು. ನಾವು ಮಾಡುವ ಅಧ್ಯಯನ, ತತ್ಪರಿಣಾಮವಾಗಿ ಬರೆಯುವ ಲೇಖನಗಳು ಕೇವಲ ತರಗೆಲೆಗಳಂತೆ ಬೇಗ ಉದುರಿಹೋಗದೆ ಅನೇಕ ವರ್ಷಗಳ ಪರ್ಯಂತ ಗೌರವ ಮತ್ತು ಗುಣಮಟ್ಟ ಉಳಿಸಿಕೊಳ್ಳಬೇಕು ಎಂಬ ಸಂದೇಶವನ್ನು ಘನ ವಿದ್ವಾಂಸ ಡಿ.ಎಲ್. ನರಸಿಂಹಾಚಾರ್ ನಮಗೆ ನೀಡಿದ್ದಾರೆ ಎಂದರು.

ವಂದನಾರ್ಪಣೆಯೊಂದಿಗೆ ಉಪನ್ಯಾಸ ಕಾರ್ಯಕ್ರಮ ಮುಕ್ತಾಯವಾಯಿತು.

## ದಿನಾಂಕ ೨೪/೦೨/೨೦೨೫ ಸೋಮವಾರ ಸಂಜೆ ಕೋಚೆ ನೆನಪಿನ ದತ್ತಿ ಆಶ್ರಯದಲ್ಲಿ ಕೋಚೆ ಅವರ 'ನ್ಯಾಯಾಧೀಶರ ನೆನಪುಗಳು' ಎಂಬ ವಿಷಯದ ಮೇಲೆ ಪ್ರಸಿದ್ಧ ವಕೀಲರು ಮತ್ತು ಬೆಂಗಳೂರು ವಕೀಲರ ಸಾಹಿತ್ಯಕೂಟದ ಮಾಜಿ ಅಧ್ಯಕ್ಷರಾದ ಶ್ರೀ ನಂಜಪ್ಪ ಕಾಳೇಗೌಡ ಅವರ ಉಪನ್ಯಾಸ ನಡೆಯಿತು.



ಕೋಚೆಯವರ ಭಾವಚಿತ್ರಕ್ಕೆ ಪುಷ್ಪ ಅರ್ಪಣೆಯ ನಂತರ ಸ್ವಾಗತ ಮತ್ತು ಪರಿಚಯಗಳು ನಡೆದವು.

**'ಪ್ರಾಮಾಣಿಕತೆ, ತಾಳ್ಮೆ, ಸಾಮಾನ್ಯ ಜ್ಞಾನ ಮತ್ತು ಸಮಯ ಪ್ರಜ್ಞೆ ಉಳ್ಳ ಕೋಚೆ'**

ಪ್ರಸಿದ್ಧ ವಕೀಲರು ಮತ್ತು ಬೆಂಗಳೂರು ವಕೀಲರ ಸಾಹಿತ್ಯಕೂಟದ ಮಾಜಿ ಅಧ್ಯಕ್ಷ ಶ್ರೀ ನಂಜಪ್ಪ ಕಾಳೇಗೌಡ ಅವರು ಉಪನ್ಯಾಸ ಮಾಡುತ್ತಾ ಬಹುಮುಖಿ ಪ್ರತಿಭೆಯ ನ್ಯಾಯಾಧೀಶರಾಗಿದ್ದ ಕೋ ಚೆನ್ನಬಸಪ್ಪ ಅವರದು ಸಾರ್ಥಕ ಜೀವನ. ಸ್ವಾತಂತ್ರ್ಯಪೂರ್ವದಿಂದ ಇತ್ತೀಚಿನವರೆಗೆ ಸಮಾಜದ ಎಲ್ಲಾ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡವರು. ಸಾಮಾನ್ಯವಾಗಿ ಅನೇಕ ನ್ಯಾಯಾಧೀಶರುಗಳು ಜನಜಂಗುಳಿಯಲ್ಲಿ ಬೆರೆಯದೇ ದೂರವಿರುತ್ತಿದ್ದ ಕಾಲದಲ್ಲಿ, ಜನರಿಗಾಗಿ, ಜನರಲ್ಲಿ ಸೇರಿ ಸೇವೆ ಮಾಡಿದರೂ ತಮ್ಮ ನ್ಯಾಯಾಧೀಶ ವೃತ್ತಿಯ ಘನತೆ ಹಾಗು ಗೌರವಕ್ಕೆ ಚ್ಯುತಿ ಬರದಂತೆ ಜವಾಬ್ದಾರಿಯುತವಾಗಿ ಕಾರ್ಯ ನಿರ್ವಹಿಸಿ, ಆ ವೃತ್ತಿಯಲ್ಲೂ 'ಸೈ' ಎನಿಸಿಕೊಂಡ ಅಪರೂಪದ ವ್ಯಕ್ತಿ ಕೋಚೆ. ಅವರು ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರರಲ್ಲಿ ಒಬ್ಬರು. 'ಬೆಳೆಯುವ ಸಿರಿ, ಮೊಳಕೆಯಲ್ಲಿ ಕಾಣುವುದು' ಅನ್ನುವಂತೆ ವಿದ್ಯಾರ್ಥಿಯಾಗಿದ್ದಾಗಲೇ ಚಳವಳಿಗಳಲ್ಲಿ ಭಾಗವಹಿಸಿದವರು. ಅವರು ನ್ಯಾಯಾಧೀಶರಾಗಲು ಇರಬೇಕಾದ ಎಲ್ಲಾ ಗುಣಗಳನ್ನು ಹೊಂದಿದ್ದವರು. ಪ್ರಾಮಾಣಿಕತೆ, ತಾಳ್ಮೆ, ಸಾಮಾನ್ಯ ಜ್ಞಾನ ಮತ್ತು ಸಮಯ ಪ್ರಜ್ಞೆ ಇವರ ವಿಶೇಷತೆ ಎನ್ನುತ್ತಾ ಕೋಚೆ ಅವರ ನ್ಯಾಯಾಧೀಶರಾಗಿದ್ದ ಅವಧಿಯಲ್ಲಿ ನಡೆದ ಕೆಲವು ಘಟನೆಗಳನ್ನು ಸಭೆಯ ಮುಂದಿಟ್ಟರು.

ಒಮ್ಮೆ ಅವರಿಗೆ ಅನಾಮಧೇಯ ಪತ್ರ ಬಂದಾಗ ಅದನ್ನು ಮನ್ನಿಸಿ, ತಾವೇ ಸ್ವತಃ ಪರಿಶೀಲಿಸಿ, ಆ ಪತ್ರದಲ್ಲಿ ಸತ್ಯವಿದೆ ಎಂಬುದನ್ನು ಖಾತ್ರಿ ಮಾಡಿಕೊಂಡು ತನಿಖೆಗೆ ಆಜ್ಞೆ ಮಾಡಿ ನಿಜವಾಗಿ ಪತ್ರದಲ್ಲಿ ನಮೂದಿಸಿರುವ ವಸ್ತು ಅನ್ಯ ವ್ಯಕ್ತಿಗೆ ತಲುಪಿದೆ ಎಂಬ ಸಂಗತಿಯನ್ನು ಬಯಲು ಮಾಡಿದ ಕೆಲವೇ ನ್ಯಾಯಾಧೀಶರಲ್ಲಿ ಕೋಚೆ ಒಬ್ಬರು ಎಂದು ಉದಾಹರಿಸಿದರು.

**'ಕೋಚೆ ಅವರಿಗೆ ಸಿಗಬೇಕಾದ ಮನ್ನಣೆ ಸಿಗಲಿಲ್ಲ'**

ಅಧ್ಯಕ್ಷತೆ ವಹಿಸಿದ್ದ ಲಕ್ಷ್ಮಣ ಕೊಡಸೆ ಅವರು ಕೋಚೆ ಅವರ ನಿವೃತ್ತಿಯ ನಂತರದ ಕೆಲವು ವಿಷಯಗಳನ್ನು ಪರಿಚಯಿಸಿದರು. ಮುಖ್ಯವಾಗಿ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ನಡೆದ ಹಲವು ಘಟನೆಗಳ ಹೊತ್ತಿಗೆಗಳನ್ನು ಕ್ರೋಢೀಕರಿಸಿ ಒಂದು ಬಹು ಉಪಯುಕ್ತ ಗ್ರಂಥವನ್ನು ಸಂಪಾದಿಸಿದ್ದನ್ನು ವಿವರಿಸಿದರು. ಆದರೆ ಅದಕ್ಕೆ ಸಿಗಬೇಕಾದ ಮನ್ನಣೆ ಇಂದಿಗೂ ಸಿಗದಿರುವುದು ಆಶ್ಚರ್ಯ ಮತ್ತು ದುಃಖದ ಸಂಗತಿ ಎಂದರು. ಕರ್ನಾಟಕ ಏಕೀಕರಣದ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿದವರು ಕೋಚೆ. ಅವರ ಲೇಖನಗಳ ಮಹತ್ವ, ಆದರ್ಶಪ್ರಾಯ ಜೀವನವನ್ನು ಗಮನಿಸಿ ಹಂಪಿಯ ಕನ್ನಡ ವಿಶ್ವವಿದ್ಯಾಲಯ 'ನಾಡೋಜ' ಎಂದು ಗೌರವಿಸಿತು. ಬಳ್ಳಾರಿ ಆಂಧ್ರದಿಂದ ಮೈಸೂರು ಸಂಸ್ಥಾನಕ್ಕೆ ಸೇರಲು ಮುಖ್ಯ ಕಾರಣ ಕೋಚೆ. ಇಷ್ಟೆಲ್ಲಾ ಮಾಡಿದ ವ್ಯಕ್ತಿಗೆ ಕರ್ನಾಟಕ ಸರಕಾರ 'Better late than never' ಅನ್ನುವಂತೆ ಕೋಚೆಯವರ ತೊಂಬತ್ತೆರಡರ ಇಳಿ ವಯಸ್ಸಿನಲ್ಲಿ 'ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ' ನೀಡಿ ಗೌರವಿಸಿತು ಅನ್ನುವುದೇ ಸಂತೋಷದ ವಿಷಯ. ಅನೇಕ ಸಂಸ್ಥೆಗಳು ಕೋಚೆ ತೊಂಬತ್ತು ವರ್ಷಗಳನ್ನು ದಾಟಿದ ಮೇಲೆ ಬರೆದ ಸಾಹಿತ್ಯಗಳನ್ನು ಅವಲೋಕಿಸಿ ಪ್ರಶಸ್ತಿಗಳನ್ನು ನೀಡಿರುವುದು ಸಮಾಧಾನದ ವಿಷಯವೇ ಎಂದರು.

ವಂದನಾರ್ಪಣೆ ಮತ್ತು ಕಿರುಕಾಣಿಕೆ ಸಲ್ಲಿಕೆಯೊಂದಿಗೆ ಉಪನ್ಯಾಸ ಕಾರ್ಯಕ್ರಮ ಮುಕ್ತಾಯವಾಯಿತು.

HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/- Date of Publishing and Posting: 28-02-2025

## ಸಹಯೋಗ ಕಾರ್ಯಕ್ರಮ – ಬಿ.ಎಂ.ಶ್ರೀ. ಪ್ರತಿಷ್ಠಾನ ಮತ್ತು ಲೇಖಿಕಾ ಸಾಹಿತ್ಯ ವೇದಿಕೆ ಇವರ ಸಂಯುಕ್ತಾಶ್ರಯದಲ್ಲಿ ದಿನಾಂಕ ೨೫ ಫೆಬ್ರುವರಿ ೨೦೨೫ ರಂದು "ವಾಣಿ ಸ್ಮರಣೆ" ಮತ್ತು "ಸಾವಿತ್ರಮ್ಮ ಅಪ್ಪಯ್ಯ" ಹಿರಿಯ ಸಾಧಕಿ ಪ್ರಶಸ್ತಿ – ೨೦೨೪ ಪ್ರದಾನ ಕಾರ್ಯಕ್ರಮವು ಬಿ.ಎಂ.ಶ್ರೀ. ಕಲಾಭವನದಲ್ಲಿ ನಡೆಯಿತು.



ಕಾರ್ಯಕ್ರಮವನ್ನು ಲೇಖಿಕಾ ಸಾಹಿತ್ಯ ವೇದಿಕೆಯ ಸಂಚಾಲಕಿ ಶ್ರೀಮತಿ ಶೈಲಜಾ ಸುರೇಶ್ ಉದ್ಘಾಟಿಸಿ ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ನಂತರ ಕನ್ನಡದ ಹಿರಿಯ ಲೇಖಕಿ ಹಾಗೂ ವಿಮರ್ಶಕಿ ಡಾ. ಮಂಗಳಾ ಪ್ರಿಯದರ್ಶಿನಿ ಡಿ. ಅವರು ಲೇಖಕಿ 'ವಾಣಿಯವರ ಬದುಕು–ಬರೆಹ' ಕುರಿತು ಮಾತನಾಡುತ್ತಾ ಯುವ ತಲೆಮಾರಿನವರಿಗೆ ಹಿರಿಯ ಲೇಖಕರ ಪರಿಚಯ ಇಂದಿನ ಅಗತ್ಯವಾಗಿದೆ ಎಂದು ಒತ್ತಿ ಹೇಳಿದರು. ವಾಣಿಯವರ ಕಥೆಗಳು ಮತ್ತು ಕಾದಂಬರಿಗಳು ಅಂದಿನ ಸಮಾಜದಲ್ಲಿ ಹೆಣ್ಣಿನ ಸ್ಥಾನಮಾನ ಹೇಗಿತ್ತು ಎನ್ನುವುದನ್ನು ಚಿತ್ರಿಸುತ್ತಿದ್ದವು ಎಂದರು.

"ಸಾವಿತ್ರಮ್ಮ ಅಪ್ಪಯ್ಯ" ಹಿರಿಯ ಲೇಖಕಿ ಸಾಧಕ ಪ್ರಶಸ್ತಿಯನ್ನು ಸ್ವೀಕರಿಸಿದ ಪುತ್ತೂರಿನ ಎ.ಪಿ. ಮಾಲತಿಯವರು ಲೇಖಿಕಾ ಸಾಹಿತ್ಯ ವೇದಿಕೆಯ ಕಾರ್ಯವನ್ನು ಶ್ಲಾಘಿಸಿದರು. ಈ ಪ್ರಶಸ್ತಿಯ ಪ್ರಾಯೋಜಕತ್ವ ವಹಿಸಿದ ಶ್ರೀ ಹೆಚ್. ವಿಶ್ವನಾಥ್ ಅವರ ಸಾಹಿತ್ಯಾಭಿಮಾನವನ್ನು ಎಲ್ಲರೂ ಮೆಚ್ಚಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ಡಾ. ಶಾಂತರಾಜು ಮಾತನಾಡುತ್ತಾ ವಾಣಿ ಅವರು ಇಂದಿಗೂ ಪ್ರಸ್ತುತವಾಗಿದ್ದಾರೆ. ಅವರ ಕಥೆ, ಕಾದಂಬರಿಗಳಲ್ಲಿ ಕಂಡುಬರುವ ಸಾಮರಸ್ಯ ಅಥವಾ ಹೊಂದಾಣಿಕೆ ಇಂದಿಗೂ ಸಮಾಜಕ್ಕೆ ಅವಶ್ಯಕ ಎಂದು ತಿಳಿಸಿದರು. ಈ ನಿಟ್ಟಿನಲ್ಲಿ 'ವಾಣಿಸ್ಮರಣೆ' ಕಾರ್ಯಕ್ರಮಗಳನ್ನು ಅರ್ಥಪೂರ್ಣವಾಗಿ ಆಚರಿಸಲಾಗುತ್ತಿವೆ ಎಂದರು.

ಇದೇ ಸಂದರ್ಭದಲ್ಲಿ 'ವಾಣಿ ಕೌಟುಂಬಿಕ ಕಥಾ ಸ್ಪರ್ಧೆ'ಗಳ ವಿಜೇತರಿಗೆ ಬಹುಮಾನವನ್ನು ನೀಡಲಾಯಿತು. ಸಮಾರಂಭದಲ್ಲಿ ಡಾ. ವಿಜಯಾ ಸುಬ್ಬರಾಜ್ ಅವರ ವಿಶಿಷ್ಟ ಅನುವಾದ ಕೃತಿ "ಹಾಳಾಗಿ ಹೋಗೋ ಮಿತ್ರೋ" (ಹಿಂದಿ ಮೂಲ – ಕೃಷ್ಣಾ ಸೋಬತಿ) ಲೋಕಾರ್ಪಣೆ ಆಯಿತು.

ಇಂದಿನ ಕಾರ್ಯಕ್ರಮವನ್ನು ಲೇಖಿಕಾ ಸಾಹಿತ್ಯ ವೇದಿಕೆಯ ಸದಸ್ಯರು ನಡೆಸಿಕೊಟ್ಟರು.

ವರದಿ: ಶ್ರೀಮತಿ ವಿಭಾ ಪುರೋಹಿತ್

### ಹಸ್ತಪ್ರತಿ ವಿಭಾಗದ ಕಾರ್ಯಕ್ರಮ

ಬೆಂಗಳೂರಿನ ಸುರಾನ ಕಾಲೇಜಿನಲ್ಲಿ ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ಮತ್ತು ಶಾಸನ ವಿಭಾಗದ ವತಿಯಿಂದ ಪ್ರದರ್ಶನ ಏರ್ಪಡಿಸಲಾಗಿತ್ತು. ಇದರಿಂದ ಪ್ರೇರಿತರಾದ ಒಬ್ಬ ಬಿ.ಎ. ಅಂತಿಮ ವರ್ಷದ ವಿದ್ಯಾರ್ಥಿ ಶ್ರೀ ಹೇಮಂತಗೌಡ ಕೆ.ಆರ್. ಅವರು ಬಿ.ಎಂ.ಶ್ರೀ. ಪ್ರತಿಷ್ಠಾನಕ್ಕೆ ಬಂದು, 'ಕೌಶಲ ಕಲಿಕೆ'ಯಾಗಿ ಒಂದು ತಿಂಗಳ internship ಮಾಡಿದರು. ಅವರು ಸಫಲವಾಗಿ 'ಹಸ್ತಪ್ರತಿಗಳ ಸಂರಕ್ಷಣೆ' ಮಾಡುವುದನ್ನು ಪ್ರಾಯೋಗಿಕವಾಗಿ ಕಲಿತಿದ್ದಾರೆ. ಈ ನಿಮಿತ್ತ ಶ್ರೀ ಹೇಮಂತಗೌಡ ಕೆ.ಆರ್. ಅವರಿಗೆ ಪ್ರಶಂಸಾ ಪ್ರಮಾಣಪತ್ರವನ್ನು ನೀಡಲಾಯಿತು.

## ಪ್ರಸ್ತುತ ತಿಂಗಳ ಅಂಗಳ

**ದಿನಾಂಕ ೧೪.೦೩.೨೦೨೫ ಶುಕ್ರವಾರ**
**ಸಂಜೆ ೫.೦೦ ಗಂಟೆಗೆ**
**ಡಾ. ಉಪ್ಪಂಗಳ ರಾಮಭಟ್ಟ ದತ್ತಿ ಉಪನ್ಯಾಸ**
ವಿಷಯ : 'ಪ್ರೊ. ಪೂರ್ಣಚಂದ್ರ ತೇಜಸ್ವಿ ಅವರ 'ಮಿಲೇನಿಯಂ' ವಿಶ್ವದರ್ಶನಕ್ಕೊಂದು ಮುನ್ನುಡಿ'
ಉಪನ್ಯಾಸಕರು : ಪ್ರೊ. ಮಧು ಬಿ.ಎನ್.
ಹಿರಿಯ ಕನ್ನಡ ಉಪನ್ಯಾಸಕರು, ಶೇಷಾದ್ರಿಪುರಂ ಪದವಿ ಪೂರ್ವ ಕಾಲೇಜು

**ದಿನಾಂಕ ೧೯–೦೩–೨೦೨೫ ಬುಧವಾರ**
**ಸಂಜೆ ೫.೦೦ ಗಂಟೆಗೆ**
**ಡಾ.ಪುಟ್ಟಶಂಕರಪ್ಪ ಶ್ರೀಮತಿ ರಾಜಲಕ್ಷ್ಮಿ ದತ್ತಿ ಉಪನ್ಯಾಸ**
ವಿಚಾರ ಮಂಡನೆ : ವಿದ್ವಾನ್ ಆರ್.ಎಸ್. ಪ್ರಗಲ್ಭ
ವಿಷಯ : 'ಉಪನಿಷತ್ತು ಹಾಗೂ ಅದರಲ್ಲಿನ ನೀತಿಪಾಠ'

**ದಿನಾಂಕ ೨೩–೦೩–೨೦೨೫ ಭಾನುವಾರ**
**ಬೆಳಗ್ಗೆ ೧೦.೩೦ ಗಂಟೆಗೆ**
**ಅಮೋಘ ವರ್ಷ ನೃಪತುಂಗ ದತ್ತಿ, ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿ ದತ್ತಿ, ಶ್ರೀ ತಿರುಮಲೆ ತಾತಾಚಾರ್ಯ ಶರ್ಮ ದತ್ತಿ, ಶ್ರೀ ಡಿ.ವಿ.ಗುಂಡಪ್ಪ, ಡಾ. ಎಸ್.ಆರ್. ರಂಗನಾಥನ್ ದತ್ತಿ ಇವುಗಳ ಸಂಯುಕ್ತ ಆಶ್ರಯದಲ್ಲಿ ಗಮಕ ವಾಚನ ಸ್ಪರ್ಧೆ**
(ಸ್ಪರ್ಧೆಯಲ್ಲಿ ವಾಚಿಸಬೇಕಾದ ಪದ್ಯ ಡಿ.ವಿ.ಜಿ. ಅವರ ಅಂತಃಪುರ ಗೀತೆಯ – ಯಾವುದಾದರೂ ಒಂದು ಪದ್ಯ)

**ದಿನಾಂಕ ೨೬–೦೩–೨೦೨೫ ಬುಧವಾರ**
**ಸಂಜೆ ೦೫.೦೦ ಗಂಟೆಗೆ**
**ಕಣಕಟ್ಟೆ ಕೃಷ್ಣಮೂರ್ತಿರಾವ್ ಸ್ಮಾರಕ ದತ್ತಿ– ಸಂಗೀತ ಕಾರ್ಯಕ್ರಮ**
ನಡೆಸಿಕೊಡುವವರು: ಡಾ. ಅನಸೂಯಾದೇವಿ
ಸಾಹಿತಿಗಳು, ನಿವೃತ್ತ ಕನ್ನಡ ಅಧ್ಯಾಪಕರು ಹಾಗೂ ಗಾಯಕರು

**Printed & Published by :** BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004 and printed by Keerthi Printers, Girinagar, Bengaluru - 560085 & published at BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004
Editor : **Dr. Belavadi K. Prabhakar**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
**ಬಿ.ಎಂ.ಶ್ರೀ. ಪ್ರತಿಷ್ಠಾನ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೭೨೮೧೨೧೨೭